Teachingninja.in

Latest Govt Job updates

Private Job updates

Free Mock tests available

Visit - teachingninja.in

# Karnataka High Court

## Previous Year Paper (Prelims) District Judge 03 Feb 2019

Teachingninja.in

A

# HIGH COURT OF KARNATAKA
## PRELIMINARY EXAMINATION FOR THE POST OF DISTRICT JUDGES

Time: 3.00 PM to 4.30 PM — Marks – 100
ಸಮಯ: ಮಧ್ಯಾಹ್ನ 3.00 ರಿಂದ ಸಂಜೆ 4.30 ಗಂಟೆ — ಅಂಕಗಳು – 100

Date: 03rd February 2019
ದಿನಾಂಕ: 3ನೇ ಫೆಬ್ರವರಿ 2019

**Note:**

***If there is any discrepancy in the question in English language and Kannada language, the questions as framed in English language shall prevail.***

*ಒಂದು ವೇಳೆ ಪ್ರಶ್ನೆಗಳಲ್ಲಿ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆ ನಡುವೆ ವ್ಯತ್ಯಾಸ ಕಂಡುಬಂದಲ್ಲಿ ಆಂಗ್ಲ ಭಾಷೆಯಲ್ಲಿ ಮುದ್ರಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ*

********

1 Not proved means
A) when a fact is neither proved nor disproved
B) when there is no documentary proof
C) conclusive proof
D) none of the above

ರುಜುವಾತಾಗದ್ದು ಎಂದರೆ
ಎ) ಸಾಬೀತಾಗದ ಮತ್ತು ರುಜುವಾತಾಗದ ಸಂಗತಿ
ಬಿ) ದಾಖಲಾತಿ ಪುರಾವೆ ಇಲ್ಲದಿರುವಿಕೆ
ಸಿ) ನಿರ್ಣಾಯಕ ಪುರಾವೆ
ಡಿ) ಮೇಲಿನ ಯಾವುದೂ ಸರಿಯಲ್ಲ

2 The legal term 'Caveat Emptor' refers to
A) Let the seller beware
B) Let the buyer beware
C) Aware of market condition
D) None of the above

ಕಾನೂನು ಪದ 'ಕೆವಿಯಟ್ ಎಮ್ಟ್ಪರ್' ಉಲ್ಲೇಖಿಸುವುದು
ಎ) ಮಾರಾಟಗಾರ ಎಚ್ಚರಿಕೆ
ಬಿ) ಖರೀದಿದಾರ ಎಚ್ಚರಿಕೆ
ಸಿ) ಮಾರುಕಟ್ಟೆಯ ಸ್ಥಿತಿಯ ಬಗ್ಗೆ ಜಾಗ್ರತಿ
ಡಿ) ಮೇಲಿನ ಯಾವುದೂ ಅಲ್ಲ

3 Failure to comply with the directions issued by the Supreme Court in the case of *Arnesh Kumar vs Sate of Bihar* regarding the arrest of persons, shall render the police officers concerned liable for
A) departmental action only
B) contempt of Court only

Teachingninja.in

C) both (A) and (B)
D) none of the above

ವ್ಯಕ್ತಿಗಳನ್ನು ದಸ್ತಗಿರಿ ಮಾಡುವ ಬಗ್ಗೆ ಸರ್ವೋಚ್ಚ ನ್ಯಾಯಾಲಯವು *ಅರನೇಶ್ ಕುಮಾರ್ ವಿರುದ್ಧ ಸ್ಟೇಟ್ ಆಫ್ ಬಿಹಾರ* ಪ್ರಕರಣದಲ್ಲಿ ನೀಡಿದ ನಿರ್ದೇಶನವನ್ನು ಪಾಲಿಸಲು ವಿಫಲರಾದ ಸಂಬಂಧಿಸಿದ ಪೋಲೀಸು ಅಧಿಕಾರಿಗಳು ಜವಾಬ್ದಾರರಾಗುವುದು
ಎ) ಇಲಾಖಾ ಕ್ರಮಕ್ಕೆ ಮಾತ್ರ
ಬಿ) ನ್ಯಾಯಾಲಯ ನಿಂದನೆಗೆ ಮಾತ್ರ
ಸಿ) (ಎ) ಮತ್ತು (ಬಿ) ಎರಡೂ
ಡಿ) ಮೇಲಿನ ಯಾವುದೂ ಅಲ್ಲ

4 Indian Penal Code came into operation in
A) 1858
B) 1860
C) 1859
D) 1862

ಭಾರತೀಯ ದಂಡ ಸಂಹಿತೆ ಜಾರಿಗೆ ಬಂದದ್ದು
ಎ) 1858
ಬಿ) 1860
ಸಿ) 1859
ಡಿ) 1862

5 Which of the following is not essential procedural requirement of Section 164 of the Code of Criminal Procedure, 1973?
A) warning the accused
B) confession to be made voluntarily
C) recording statement in the presence of advocate of the accused
D) memorandum at the foot of confession

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 164ಕ್ಕೆ ಈ ಕೆಳಕಂಡ ಯಾವುದು ಅಗತ್ಯವಾದ ಪ್ರಕ್ರಿಯೆಯಲ್ಲ?
ಎ) ಆರೋಪಿಗೆ ಎಚ್ಚರಿಕೆ ಕೊಡುವುದು
ಬಿ) ತಪ್ಪೊಪ್ಪಿಗೆಯನ್ನು ಸ್ವಪ್ರೇರಣೆಯಿಂದ ಮಾಡಿರಬೇಕು
ಸಿ) ಆರೋಪಿಯ ವಕೀಲರ ಉಪಸ್ಥಿತಿಯಲ್ಲಿ ಹೇಳಿಕೆಯನ್ನು ದಾಖಲಿಸಿಕೊಳ್ಳಬೇಕು
ಡಿ) ತಪ್ಪೊಪ್ಪಿಗೆಯ ಪಾದದಲ್ಲಿ ಟಿಪ್ಪಣಿ

6 Which of the following is the correct legal position in relation to the Narcotic Drugs and Psychotropic Substances Act?

A) when trying an offence under NDPS Act, a Special Court may also try an offence other than an offence under the said Act with which the accused may, under the Code of Criminal Procedure, 1973 be charged at the same trial

Teachingninja.in

B) special Court can try only the offence under the NDPS Act and should direct the accused to face trial for other offences before the regular Court

C) the special Court can try other non NDPS offences only if the Jurisdictional JMFC commits the case to the special Court

D) None of the above

ಮಾಧಕ ದ್ರವ್ಯ ಮತ್ತು ಮನೋವಿಕೃತ ವಸ್ತುಗಳ ಅಧಿನಿಯಮದ ಸಂಬಂಧದಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಸರಿಯಾದ ಕಾನೂನಿನ ಸ್ಥಿತಿ?

ಎ) ಎನ್.ಡಿ.ಪಿ.ಎಸ್. ಅಧಿನಿಯಮದ ಅಡಿಯಲ್ಲಿನ ಅಪರಾಧದ ಅಧಿವಿಚಾರಣೆ ಮಾಡುವಾಗ ಅಪರಾಧ ಪ್ರಕ್ರಿಯಾ ಸಂಹಿತೆ, 1973ರಡಿಯಲ್ಲಿ ಬೇರೆ ಅಪರಾಧದ ಬಗ್ಗೆಯೂ ಅದೇ ಅಧಿವಿಚಾರಣೆಯಲ್ಲಿ ವಿಶೇಷ ನ್ಯಾಯಾಲಯ ಆರೋಪಿಯನ್ನು ವಿಚಾರಣೆ ಮಾಡಬಹುದು

ಬಿ) ವಿಶೇಷ ನ್ಯಾಯಾಲಯ ಎನ್.ಡಿ.ಪಿ.ಎಸ್. ಅಧಿನಿಯಮದ ಅಡಿಯಲ್ಲಿನ ಅಪರಾಧವನ್ನು ಮಾತ್ರ ಅಧಿವಿಚಾರಣೆ ಮಾಡಬಹುದು ಮತ್ತು ಬೇರೆ ಅಪರಾಧಗಳ ಬಗ್ಗೆ ನಿಯತ ನ್ಯಾಯಾಲಯದಲ್ಲಿ ಅಧಿವಿಚಾರಣೆ ಎದುರಿಸಲು ನಿರ್ದೇಶಿಸತಕ್ಕದು

ಸಿ) ಎನ್.ಡಿ.ಪಿ.ಎಸ್. ಯೇತರ ಅಪರಾಧಗಳಿಗೆ ಸಂಬಂಧಪಟ್ಟಂತೆ ಪ್ರಕರಣವನ್ನು ಅಧಿಕಾರ ವ್ಯಾಪ್ತಿಯುಳ್ಳ ಜೆ.ಎಂ.ಎಫ್.ಸಿ. ನ್ಯಾಯಾಲಯವು ವಿಶೇಷ ನ್ಯಾಯಾಲಯಕ್ಕೆ ಕಮಿಟ್ ಮಾಡಿದರೆ ಮಾತ್ರ ವಿಶೇಷ ನ್ಯಾಯಾಲಯವು ಅವುಗಳ ಅಧಿವಿಚಾರಣೆ ಮಾಡಬಹುದು

ಡಿ) ಮೇಲಿನ ಯಾವುದು ಅಲ್ಲ

7 Article 51A of the Constitution of India provides for
A) directive principles of state policy
B) fundamental rights
C) fundamental duties of every citizen
D) fundamental duties of a Government servant

ಭಾರತೀಯ ಸಂವಿಧಾನ ಅನುಚ್ಛೇದ 51ಎ ಉಪಬಂಧಿಸುವುದು
ಎ) ರಾಜ್ಯ ನೀತಿ ನಿರ್ದೇಶನ ತತ್ವಗಳು
ಬಿ) ಮೂಲಭೂತ ಹಕ್ಕುಗಳು
ಸಿ) ಪ್ರತಿಯೊಬ್ಬ ನಾಗರಿಕನ ಮೂಲಭೂತ ಕರ್ತವ್ಯಗಳು
ಡಿ) ಸರ್ಕಾರಿ ನೌಕರನ ಮೂಲಭೂತ ಕರ್ತವ್ಯಗಳು

8 The presence of the informant or any person authorised by him shall be obligatory at the hearing of the application under Section 439 of the Code of Criminal Procedure, 1973, for the bail to the person accused of the offence punishable
A) under Section 376D IPC
B) under Section 302 IPC
C) under Section 376DB IPC
D) under Section 304B IPC

Teachingninja.in

_______ ಅಪರಾಧದ ಆರೋಪಕ್ಕೊಳಗಾದ ವ್ಯಕ್ತಿಯು ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 439ರಡಿಯಲ್ಲಿ ಸಲ್ಲಿಸಿರುವ ಜಾಮೀನು ಅರ್ಜಿಯ ವಿಚಾರಣೆಯ ಸಮಯದಲ್ಲಿ ಮಾಹಿತಿದಾರ ಅಥವಾ ಆತನಿಂದ ಅಧಿಕಾರ ಹೊಂದಿದ ವ್ಯಕ್ತಿಯ ಹಾಜರಾತಿಯು ಕಡ್ಡಾಯವಾಗಿರತಕ್ಕದು

ಎ) ಭಾರತ ದಂಡ ಸಂಹಿತೆಯ, ಕಲಂ 376ಡಿ
ಬಿ) ಭಾರತ ದಂಡ ಸಂಹಿತೆಯ, ಕಲಂ 302
ಸಿ) ಭಾರತ ದಂಡ ಸಂಹಿತೆಯ, ಕಲಂ 376ಡಿಬಿ
ಡಿ) ಭಾರತ ದಂಡ ಸಂಹಿತೆಯ, ಕಲಂ 304ಬಿ

9 _________ can seek advisory opinion of the Supreme Court regarding question of law under the Constitution of India

A) President
B) Governor
C) Prime Minister
D) President and Governor

__________ ರವರು ಕಾನೂನಿನ ಪ್ರಶ್ನೆಯ ಬಗ್ಗೆ ಭಾರತ ಸಂವಿಧಾನದ ಅಡಿಯಲ್ಲಿ ಸರ್ವೋಚ್ಚ ನ್ಯಾಯಾಲಯದ ಸಲಹಾ ಅಭಿಪ್ರಾಯವನ್ನು ಕೋರಬಹುದು

ಎ) ರಾಷ್ಟ್ರಪತಿ
ಬಿ) ರಾಜ್ಯಪಾಲರು
ಸಿ) ಪ್ರಧಾನ ಮಂತ್ರಿ
ಡಿ) ರಾಷ್ಟ್ರಪತಿ ಮತ್ತು ರಾಜ್ಯಪಾಲರು

10 Sexual Harassment of women at work place (Prevention, Prohibition and Redressal) Act, 2013 is known as _________

A) the Vishaka Act
B) the Nirbhaya Act
C) the Mathura Act
D) none of the above

ಕಾರ್ಯನಿರ್ವಹಣೆ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ನಿವಾರಣೆ) ಕಾಯಿದೆ 2013ನ್ನು _______ ಎಂದು ಕರೆಯಲಾಗುತ್ತದೆ

ಎ) ವಿಶಾಖಾ ಕಾಯಿದೆ
ಬಿ) ನಿರ್ಭಯಾ ಕಾಯಿದೆ
ಸಿ) ಮಥುರಾ ಕಾಯಿದೆ
ಡಿ) ಮೇಲಿನ ಯಾವುದೂ ಅಲ್ಲ

11 Under Section 39 of the Specific Relief Act, 1963, the mandatory injunction can be granted

A) to prevent breach of an obligation only
B) to compel the performance of certain acts only
C) when there is no obligation/act to perform
D) both (A) and (B)

Teachingninja.in

ನಿರ್ದಿಷ್ಟ ಪರಿಹಾರ ಅಧಿನಿಯಮ, 1963ರ ಕಲಂ 39ರ ಅಡಿಯಲ್ಲಿ ಆಜ್ಞಾಪಕ ನಿರ್ಬಂಧಕಾಜ್ಞೆ ನೀಡಬಹುದಾಗಿದ್ದು
ಎ) ಹೊಣೆಗಾರಿಕೆಯ ಉಲ್ಲಂಘನೆಯನ್ನು ತಡೆಯುವುದಕ್ಕಾಗಿ
ಬಿ) ಕೆಲವು ಕಾರ್ಯಗಳ ಪಾಲನೆಗೆ ಒತ್ತಾಯ ಪಡಿಸುವುದಕ್ಕಾಗಿ ಮಾತ್ರ
ಸಿ) ಪಾಲನೆ ಮಾಡಬೇಕಾದ ಹೊಣೆಗಾರಿಕೆ/ಕಾರ್ಯ ಇಲ್ಲದಿರುವಾಗ
ಡಿ) (ಎ) ಮತ್ತು (ಬಿ) ಎರಡೂ

12 Which one of the following is an actionable wrong?
A) Injuria sine damnum
B) Damnum sine injuria
C) Both the above
D) none of the above

ಈ ಕೆಳಗಿನವುಗಳಲ್ಲಿ ಯಾವುದು ಒಂದು ಅಕ್ರಮಕೃತ್ಯ?
ಎ) ಇಂಜೂರಿಯ ಸೈನ್ ಡಾಮ್‌ನಮ್
ಬಿ) ಡಾಮ್‌ನಮ್ ಸೈನ್ ಇಂಜೂರಿಯ
ಸಿ) ಮೇಲಿನ ಎರಡೂ
ಡಿ) ಮೇಲಿನ ಯಾವುದೂ ಅಲ್ಲ

13 Who among the following is the Chairman of the Council of States or Rajya Sabha?
A) President of India
B) Vice-President of India
C) Chief Justice of India
D) to be elected among the Members of Parliament of Rajya Sabha

ಈ ಕೆಳಗಿನವರ ಪೈಕಿ ಯಾರು ರಾಜ್ಯ ಸಭೆಯ ಸಭಾಪತಿಯಾಗಿರುತ್ತಾರೆ?
ಎ) ಭಾರತದ ರಾಷ್ಟ್ರಪತಿ
ಬಿ) ಭಾರತದ ಉಪರಾಷ್ಟ್ರಪತಿ
ಸಿ) ಭಾರತದ ಮುಖ್ಯ ನ್ಯಾಯಮೂರ್ತಿ
ಡಿ) ಸಂಸತ್ತಿನ ರಾಜ್ಯ ಸಭೆಯ ಸದಸ್ಯರ ಪೈಕಿ ಚುನಾಯಿತರಾದವರು

14 Which of the following is not a grievous hurt under Section 320 of the Indian Penal Code?
A) permanent privation of sight of either eye
B) permanent privation of earing of either ear
C) a hurt as a consequence of which the victim was not able to follow his oridnary pursuits and sufferd bodily pain for 15 days
D) dislocation of a tooth

ಈ ಕೆಳಗಿನವುಗಳಲ್ಲಿ ಯಾವುದು ಭಾರತ ದಂಡ ಸಂಹಿತೆ, 1860ರ ಕಲಂ 320ರ ಪ್ರಕಾರ ತೀವ್ರ ಸ್ವರೂಪದ ಗಾಯವಲ್ಲ?
ಎ) ಕಣ್ಣುಗಳಲ್ಲಿ ಯಾವುದಾದರೊಂದರ ಶಾಶ್ವತ ದೃಷ್ಟಿ ನಷ್ಟತೆ
ಬಿ) ಕಿವಿಗಳಲ್ಲಿ ಯಾವುದಾದರೊಂದರ ಶಾಶ್ವತ ಶ್ರವಣ ನಷ್ಟತೆ

Teachingninja.in

ಸಿ) ಸಂತ್ರಸ್ತನಿಗೆ 15 ದಿನಗಳ ಪರ್ಯಂತ ತನ್ನ ಸಾಮಾನ್ಯ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಅಶಕ್ಯವನ್ನುಂಟುಮಾಡುವ ಮತ್ತು ದೈಹಿಕ ಯಾತನೆ ಉಂಟು ಮಾಡುವ ಗಾಯ
ಡಿ) ಹಲ್ಲುಗಳ ಸ್ಥಳಾಂತರ

15 Which of the following sections of the Code of Criminal Procedure, 1973 prohibits the conversion of a finding of acquittal into one of conviction?
A) Section 397(1)
B) Section 397(2)
C) Section 401(3)
D) Section 401(2)

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಈ ಕೆಳಗಿನ ಯಾವ ಕಲಂ ದೋಷಮುಕ್ತಗೊಳಿಸಿದ ತೀರ್ಮಾನವನ್ನು ದೋಷಿ ತೀರ್ಮಾನಕ್ಕೆ ವರ್ಗಾವಣೆ ಮಾಡುವುದನ್ನು ನಿಷೇಧಿಸುತ್ತದೆ?
ಎ) ಕಲಂ 397(1)
ಬಿ) ಕಲಂ 397(2)
ಸಿ) ಕಲಂ 401(3)
ಡಿ) ಕಲಂ 401(2)

16 Article 234 of the Constitution of India provides for the
A) appointment of District Judges
B) appointment of High Court Judges
C) appointment of persons other than District Judges to the Judicial Service of a State
D) administration of Judicial Service

ಭಾರತೀಯ ಸಂವಿಧಾನದ ಅನುಚ್ಛೇದ 234 ಉಪಬಂಧಿಸುವುದು
ಎ) ಜಿಲ್ಲಾ ನ್ಯಾಯಾದೀಶರುಗಳ ನೇಮಕಾತಿ
ಬಿ) ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳ ನೇಮಕಾತಿ
ಸಿ) ರಾಜ್ಯ ನ್ಯಾಯಾಂಗ ಸೇವೆ ಜಿಲ್ಲಾ ನ್ಯಾಯಾಧೀಶರನ್ನು ಹೊರತು ಪಡಿಸಿ ಇನ್ನುಳಿದ ವ್ಯಕ್ತಿಗಳ ನೇಮಕಾತಿ
ಡಿ) ನ್ಯಾಯಾಂಗ ಸೇವೆಯ ಆಡಳಿತ

17 Which of the following charges cannot be compounded without the leave of the Court before which the prosecution is pending?
A) Section 298 of the Indian Penal Code, 1860
B) Section 426 of the Indian Penal Code, 1860
C) Section 491 of the Indian Penal Code, 1860
D) Section 494 of the Indian Penal Code, 1860

ಯಾವ ನ್ಯಾಯಾಲಯದಲ್ಲಿ ಅಭಿಯೋಜನೆ ಬಾಕಿ ಇದೆಯೋ ಆ ನ್ಯಾಯಾಲಯದ ಅನುಮತಿ ಇಲ್ಲದೆ ಈ ಕೆಳಕಂಡ ಯಾವ ದೋಷಾರೋಪಣೆಯನ್ನು ರಾಜಿ ಮಾಡಲು ಬರುವುದಿಲ್ಲ?
ಎ) ಭಾರತ ದಂಡ ಸಂಹಿತೆ, 1860ರ ಕಲಂ 298
ಬಿ) ಭಾರತ ದಂಡ ಸಂಹಿತೆ, 1860ರ ಕಲಂ 426
ಸಿ) ಭಾರತ ದಂಡ ಸಂಹಿತೆ, 1860ರ ಕಲಂ 491
ಡಿ) ಭಾರತ ದಂಡ ಸಂಹಿತೆ, 1860ರ ಕಲಂ 494

Teachingninja.in

18 'Immovable Property' under the Transfer of Property Act, 1882 includes
A) grass
B) standing timber
C) growing crop
D) none of the above

ಸ್ವತ್ತು ವರ್ಗಾವಣೆ ಅಧಿನಿಯಮ, 1882ರ ಅಡಿಯಲ್ಲಿ 'ಸ್ಥಿರ ಸ್ವತ್ತು' ಒಳಗೊಂಡಿರುವುದು
ಎ) ಹುಲ್ಲು
ಬಿ) ಬೆಳೆದು ನಿಂತಿರುವ ಮರಗಳು
ಸಿ) ಬೆಳೆಯುತ್ತಿರುವ ಬೆಳೆ
ಡಿ) ಮೇಲಿನ ಯಾವುದೂ ಅಲ್ಲ

19 Article 16 of the Constitution of India provides for
A) Equality before law
B) Equality of opportunity in matters of public employment
C) Separation of judiciary from executive
D) Right to work and right to education

ಭಾರತೀಯ ಸಂವಿಧಾನದ ಅನುಚ್ಛೇದ 16 ಉಪಬಂಧಿಸುವುದು
ಎ) ಕಾನೂನಿನ ಮುಂದೆ ಸಮಾನತೆ
ಬಿ) ಸಾರ್ವಜನಿಕ ಉದ್ಯೋಗದ ವಿಷಯಗಳಲ್ಲಿ ಸಮಾನ ಅವಕಾಶ
ಸಿ) ಕಾರ್ಯಾಂಗದಿಂದ ನ್ಯಾಯಾಂಗದ ಪ್ರತ್ಯೇಕತೆ
ಡಿ) ದುಡಿಮೆಯ ಹಕ್ಕು ಮತ್ತು ಶಿಕ್ಷಣದ ಹಕ್ಕು

20 For arrest of an accused alleged to have committed an offence under the Scheduled Caste and Scheduled Tribes (Prevention of Atrocities) Act, 1989
A) the investigating officer needs the approval of the jurisdictional J.M.F.C.
B) the investigation officer needs the approval of the special Court
C) the investigation officer needs the approval of the official superiors
D) the investigation officer does not need the approval of any one

ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ, 1989 ಅಡಿಯಲ್ಲಿ ಅಪರಾಧದ ಆರೋಪಕ್ಕೊಳಗಾದ ಆರೋಪಿಯ ದಸ್ತಗಿರಿ ಮಾಡಲು
ಎ) ತನಿಖಾಧಿಕಾರಿಗೆ ಅಧಿಕಾರ ವ್ಯಾಪ್ತಿಯುಳ್ಳ ಜೆ.ಎಂ.ಎಫ್.ಸಿ.ಯ ಮಂಜೂರಾತಿ ಅಗತ್ಯವಿದೆ
ಬಿ) ತನಿಖಾಧಿಕಾರಿಗೆ ವಿಶೇಷ ನ್ಯಾಯಾಲಯದ ಮಂಜೂರಾತಿ ಅಗತ್ಯವಿದೆ
ಸಿ) ತನಿಖಾಧಿಕಾರಿಗೆ ಮೇಲಾಧಿಕಾರಿಗಳ ಮಂಜೂರಾತಿ ಅಗತ್ಯವಿದೆ
ಡಿ) ತನಿಖಾಧಿಕಾರಿಗೆ ಯಾರಿಂದಲೂ ಮಂಜೂರಾತಿ ಅಗತ್ಯವಿರುವುದಿಲ್ಲ

21 Second Appeal under Section 100 of the Code of Civil Procedure, 1908 is maintainable, if it involves
A) a substantial question of law
B) a substantial question of fact

Teachingninja.in

C) an appreciation of judgment and decree
D) all the above

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕಲಂ 100ರ ಅಡಿಯಲ್ಲಿ ಎರಡನೇ ಮೇಲ್ಮನವಿ ಊರ್ಜಿತ ಯೋಗ್ಯವಾಗುವುದು ಈ ಕೆಳಕಂಡ ಅಂಶಗಳು ಒಳಗೊಂಡಿದ್ದಾಗ
ಎ) ಗಣನೀಯ ಕಾನೂನು ಪ್ರಶ್ನೆ
ಬಿ) ಗಣನೀಯ ಸಂಗತಿ
ಸಿ) ತೀರ್ಮ ಮತ್ತು ಡಿಕ್ರಿಯ ಯೋಗ್ಯತಾ ನಿರ್ಣಯ
ಡಿ) ಮೇಲಿನ ಎಲ್ಲವೂ

22 In law a man is presumed to be dead, if he is not heard of as alive for
A) 4 years
B) 7 years
C) 10 years
D) 15 years

ಒಬ್ಬ ವ್ಯಕ್ತಿಯು ಜೀವಂತ ಇರುವಿಕೆಯ ಕುರಿತು ಯಾವುದೇ ಸುದ್ದಿಯನ್ನು ______ ಕೇಳದೇ ಇದ್ದರೆ ಅವನು ಮರಣ ಹೋಂದಿದ್ದಾನೆ ಎಂದು ಕಾನೂನಿನಲ್ಲಿ ಪೂರ್ವಭಾವಿಸಲಾಗುತ್ತದೆ
ಎ) ನಾಲ್ಕು ವರ್ಷಗಳವರೆಗೆ
ಬಿ) ಏಳು ವರ್ಷಗಳವರೆಗೆ
ಸಿ) ಹತ್ತು ವರ್ಷಗಳವರೆಗೆ
ಡಿ) ಹದಿನೈದು ವರ್ಷಗಳವರೆಗೆ

23 Application for setting aside an arbitral award can be made under Section 34 of the Arbitration and Conciliation Act, 1996 on the following grounds

A) the arbitration agreement is not valid under the law to which the parties have subjected it only
B) a party was under some incapacity only
C) the party making the application was not given proper notice of the arbitral proceedings only
D) all the above

ಮಧ್ಯಸ್ತಿಕೆ ಮತ್ತು ಸಂಧಾನ ಅದಿನಿಯಮ, 1996ರ ಕಲಂ 34ರ ಅಡಿಯಲ್ಲಿ ಮಧ್ಯಸ್ತ ಐತೀರ್ಪನ್ನು ರದ್ದುಪಡಿಸಲು ಅರ್ಜಿಯನ್ನು ಈ ಕೆಳಕಂಡ ಕಾರಣಗಳಿಗೆ ಸಲ್ಲಿಸಬಹುದು

ಎ) ಪಕ್ಷಕಾರರು ಒಪ್ಪಿಕೊಂಡಿರುವ ಮಧ್ಯಸ್ತಿಕೆ ಕರಾರು ಕಾನೂನು ಮಾನ್ಯವಾಗಿರದೇ ಇದ್ದಲ್ಲಿ ಮಾತ್ರ
ಬಿ) ಪಕ್ಷಕಾರರು ಕೆಲವು ಅಸಮರ್ಥತೆಯಲ್ಲಿ ಇದ್ದಾಗ ಮಾತ್ರ
ಸಿ) ಅರ್ಜಿ ಹಾಕಿದ ಪಕ್ಷಕಾರರಿಗೆ ಮಧ್ಯಸ್ತಿಕೆ ವ್ಯವಹರಣೆಯ ಬಗ್ಗೆ ಸರಿಯಾದ ನೋಟೀಸು ಕೊಡದೇ ಇದ್ದಾಗ ಮಾತ್ರ
ಡಿ) ಮೇಲಿನ ಎಲ್ಲವೂ

Teachingninja.in

24 Which of the following is the correct legal position in relation to cases under the Prevention of Corruption Act?

A) for registration of F.I.R. under the Prevention of Corruption Act in all the cases investigating officer needs an order of Mertopolitian Magistrate or Judicial Magistrate of the first class

B) investigating officer needs permission of the Metropolitian Magistrate or Judicial Magistrate of the first class for investigation under the Prevention of Corruption Act

C) investigating officer cannot arrest the accused without a warrant from a Metropolitan Magistrate or Judicial Magistrate first class under the Prevention of Corruption Act

D) Police Officer cannot investigate without the order or make an arrest without warrant of Metropolitan Magistrate or Judicial Magistrate first class if he is a police officer below the rank of an inspector of police in the Delhi special police establishment, of an Assistant Commissioner of Police in a notified metropolitan area or Deputy Sub-Inspector of Police or a Police Officer of equivalent rank elsewhere under the Prevention of Corruption Act

ಭ್ರಷ್ಟಾಚಾರ ಪ್ರತಿಬಂಧ ಆಧಿನಿಯಮ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವುದು ಸರಿಯಾದ ಕಾನೂನಿನ ಸ್ಥಿತಿ?

ಎ) ಭ್ರಷ್ಟಾಚಾರ ಪ್ರತಿಬಂಧ ಕಾಯಿದೆಯಡಿಯಲ್ಲಿ ಪ್ರಥಮ ವರ್ತಮಾನ ವರದಿಯನ್ನು ನೋಂದಾಯಿಸಿಕೊಳ್ಳಲು ತನಿಖಾಧಿಕಾರಿಗೆ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮ ದರ್ಜೆ ಜ್ಯಡಿಷಿಯಲ್ ಮ್ಯಾಜಿಸ್ಟ್ರೇಟ್‌ರಿಂದ ಆದೇಶ ಅವಶ್ಯಕತೆಯಿದೆ

ಬಿ) ಭ್ರಷ್ಟಾಚಾರ ಪ್ರತಿಬಂಧ ಕಾಯಿದೆಯಡಿ ತನಿಖೆ ಮಾಡಬೇಕಾದರೆ ತನಿಖಾಧಿಕಾರಿಗೆ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮ ದರ್ಜೆ ಜ್ಯಡಿಷಿಯಲ್ ಮ್ಯಾಜಿಸ್ಟ್ರೇಟ್‌ರಿಂದ ಅನುಮತಿಯ ಅವಶ್ಯಕತೆಯಿದೆ

ಸಿ) ಭ್ರಷ್ಟಾಚಾರ ಪ್ರತಿಬಂಧ ಕಾಯಿದೆಯಡಿ ತನಿಖಾಧಿಕಾರಿ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮ ದರ್ಜೆ ಜ್ಯಡಿಷಿಯಲ್ ಮ್ಯಾಜಿಸ್ಟ್ರೇಟ್‌ರಿಂದ ವಾರಂಟ್ ಇಲ್ಲದೆ ದಸ್ತಗಿರಿ ಮಾಡಲು ಬರುವುದಿಲ್ಲ

ಡಿ) ದೆಹಲಿ ವಿಶೇಷ ಪೋಲೀಸು ಪಡೆಯ ಅಧಿಕಾರಿಯಾದ ಸಂದರ್ಭದಲ್ಲಿ ಪೋಲೀಸು ಇನ್ಸ್‌ಪೆಕ್ಟರ್ ಹುದ್ದೆಯ ಅಧಿಕಾರಿಯಾಗಿರದ ಹೊರತು, ಅಧಿಸೂಚಿಸಿರುವ ಯಾವುದೇ ಇತರ ಮಹಾನಗರ ಪ್ರದೇಶದಲ್ಲಿ ಪೋಲೀಸು ಅಸಿಸ್ಟೆಂಟ್ ಕಮೀಷನರ್ ಹುದ್ದೆಯ ಅಧಿಕಾರಿಯಾಗಿರದ ಹೊರತು ಅಥವಾ ಇನ್ನಿತರ ಪ್ರದೇಶಗಳಲ್ಲಿ, ಉಪ ಜಿಲ್ಲಾ ವರಿಷ್ಠಾಧಿಕಾರಿ ಅಥವಾ ತತ್ಸಮ ದರ್ಜೆಯ ಪೋಲೀಸು ಅಧಿಕಾರಿಯಾಗಿರದ ಹೊರತು ಇತರೆ ಯಾವುದೇ ಕಡಿಮೆ ದರ್ಜೆಯ ಪೋಲೀಸು ಅಧಿಕಾರಿಯು ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮ ದರ್ಜೆ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್‌ರವರ ಆದೇಶವಿಲ್ಲದೆ ಭ್ರಷ್ಟಾಚಾರ ಪ್ರತಿಬಂಧ ಕಾಯಿದೆಯಡಿ ತನಿಖೆ ನಡೆಸತಕ್ಕದಲ್ಲ ಅಥವಾ ವಾರಂಟ್ ಇಲ್ಲದೆ ದಸ್ತಗಿರಿ ಮಾಡತಕ್ಕದಲ್ಲ

25 'A' committed an offence on 1.10.2010. On the said date punishment prescribed for the said offence was imprisonment upto 3 years. On 1.10.2011, by an amendment, the punishment of imprisonment for the offence was enhanced upto 7 years. The trial was concluded on

Teachingninja.in

10.10.2011 and 'A' was found guilty. 'A' can be sentenced to imprisonment
A) upto 3 years
B) upto 7 years
C) between 3 years and 7 years
D) none of the above

ದಿನಾಂಕ 1.10.2010ರಂದು 'ಎ' ಒಂದು ಅಪರಾಧವನ್ನು ಮಾಡುತ್ತಾನೆ. ಆ ದಿನದಂದು ಸದರಿ ಅಪರಾಧಕ್ಕೆ ನಿಗದಿತ ಶಿಕ್ಷೆಯು ಮೂರು ವರ್ಷಗಳವರೆಗಿನ ಕಾರಾಗೃಹ ವಾಸವಾಗಿತ್ತು. ದಿನಾಂಕ 1.10.2011ರಂದು ಸದರಿ ಕಾನೂನಿಗೆ ತಿದ್ದುಪಡಿ ಮಾಡಿ ನಿಗದಿತ ಶಿಕ್ಷೆಯನ್ನು ಏಳು ವರ್ಷಗಳವರೆಗಿನ ಕಾರಾಗೃಹ ವಾಸಕ್ಕೆ ಹೆಚ್ಚಿಸಲಾಯಿತು. ಪ್ರಕರಣದ ಅಧಿವಿಚಾರಣೆಯು ದಿನಾಂಕ 10.10.2011ರಂದು ಮುಕ್ತಾಯಗೊಂಡಿತು ಮತ್ತು 'ಎ' ಸಿದ್ಧ ದೋಷಿಯೆಂದು ತೀರ್ಮಾನಿಸಲಾಯಿತು. 'ಎ'ಗೆ ವಿಧಿಸಬಹುದಾದ ಕಾರಾಗೃಹ ಶಿಕ್ಷೆಯು
ಎ) 3 ವರ್ಷಗಳವರೆಗೆ
ಬಿ) 7 ವರ್ಷಗಳವರೆಗೆ
ಸಿ) 3 ರಿಂದ 7 ವರ್ಷಗಳವರೆಗೆ
ಡಿ) ಮೇಲಿನ ಯವುದೂ ಅಲ್ಲ

26 If the President of India intends to resign his office may tender his resignation
A) to the Chief Justice of India
B) to the Speaker of the Lok-Sabha
C) to the Vice-President of India
D) to the Prime Minister

ಭಾರತದ ರಾಷ್ಟ್ರಪತಿಯು ತನ್ನ ಪದಕ್ಕೆ ರಾಜೀನಾಮೆ ಕೊಡಲು ಇಚ್ಛಿಸಿದಲ್ಲಿ ರಾಜೀನಾಮೆಯನ್ನು ಸಲ್ಲಿಸಬೇಕಾಗಿರುವುದು
ಎ) ಭಾರತದ ಮುಖ್ಯ ನ್ಯಾಯಮೂರ್ತಿಗೆ
ಬಿ) ಲೋಕಸಭೆಯ ಸ್ಪೀಕರ್‌ಗೆ
ಸಿ) ಭಾರತದ ಉಪರಾಷ್ಟ್ರಪತಿಗೆ
ಡಿ) ಪ್ರಧಾನ ಮಂತ್ರಿಗೆ

27 Notice is mandatory under Section 80 of the Code of Civil Procedure, 1908, if the suit is filed against
A) Corporation only
B) Government only
C) Zilla Panchayath only
D) all the above

ಈ ಕೆಳಕಂಡ _______ ರವರ ವಿರುದ್ಧ ದಾವೆ ಮಾಡಿದಾಗ ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕಲಂ 80ರ ಅಡಿಯಲ್ಲಿ ನೋಟೀಸು ಆಜ್ಞಾಪಕವಾಗುತ್ತದೆ
ಎ) ನಿಗಮ ಮಾತ್ರ
ಬಿ) ಸರ್ಕಾರ ಮಾತ್ರ
ಸಿ) ಜಿಲ್ಲಾ ಪಂಚಾಯಿತಿ ಮಾತ್ರ
ಡಿ) ಮೇಲಿನ ಎಲ್ಲವೂ

Teachingninja.in

28 Under the Specific Relief Act 1963, a suit for recovery of possession can be filed
A) only in respect of movable property
B) only in respect of immovable property
C) in respect of both movable and immovable property
D) neither the movable nor immovable property

ನಿರ್ದಿಷ್ಟ ಪರಿಹಾರ ಅಧಿನಿಯಮ 1963ರ ಅಡಿಯಲ್ಲಿ ಸ್ವಾಧೀನ ಪಡಿಸುವ ದಾವೆಯನ್ನು ಮಾಡಬಹುದಾಗಿರುವುದು
ಎ) ಚರಾಸ್ತಿಯ ಬಗ್ಗೆ ಮಾತ್ರ
ಬಿ) ಸ್ಥಿರಾಸ್ತಿಯ ಬಗ್ಗೆ ಮಾತ್ರ
ಸಿ) ಚರ ಮತ್ತು ಸ್ಥಿರಾಸ್ತಿ ಎರಡರ ಬಗ್ಗೆ
ಡಿ) ಚರಾಸ್ತಿ ಅಥವಾ ಸ್ಥಿರಾಸ್ತಿ ಎರಡೂ ಅಲ್ಲ

29 Which of the following is correctly matched according to the Indian Evidence Act, 1872?
A) Refreshing memory - Section 158(B)
B) Identification Parade - Section 10
C) Admission - Section 24
D) none of the above

ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಪ್ರಕಾರ ಕೆಳಗಿನವುಗಳಲ್ಲಿ ಯಾವುದು ಸರಿಯಾಗಿ ಹೊಂದಾಣಿಕೆಯಾಗುತ್ತದೆ?
ಎ) ಮರು ಸ್ಮರಣೆ – ಕಲಂ 158(ಬಿ)
ಬಿ) ಗುರುತಿಸುವ ಕವಾಯತು – ಕಲಂ 10
ಸಿ) ಒಪ್ಪಿಗೆ – ಕಲಂ 24
ಡಿ) ಮೇಲಿನ ಯಾವುದೂ ಅಲ್ಲ

30 Under the Code of Civil Procedure, 1908, when the appellant does not appear when the appeal is called on for hearing
A) the Court may dismiss the appeal on merits
B) the appeal can be dismissed on merits after appointing an amicus curiae
C) the Court can allow the appeal on merits
D) the Court may make an order that the appeal be dismissed

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಅಡಿಯಲ್ಲಿ ಸುನಾವಣೆಗಾಗಿ ಮೇಲ್ಮನವಿಯನ್ನು ಕರೆದಾಗ ಮೇಲ್ಮನವಿದಾರನು ಹಾಜರಾಗದಿದ್ದಲ್ಲಿ
ಎ) ನ್ಯಾಯಾಲಯವು ಮೇಲ್ಮನವಿಯನ್ನು ಗುಣಾಂಶಗಳ ಮೇಲೆ ವಜಾ ಮಾಡಬಹುದು
ಬಿ) ಕಾನೂನಿನ ಮಿತ್ರನನ್ನು ನೇಮಕ ಮಾಡಿದ ನಂತರ ಮೇಲ್ಮನವಿಯನ್ನು ಗುಣಾಂಶಗಳ ಮೇಲೆ ವಜಾ ಮಾಡಬಹುದು
ಸಿ) ಗುಣಾಂಶಗಳ ಮೇಲೆ ನ್ಯಾಯಾಲಯ ಮೇಲ್ಮನವಿಯನ್ನು ಪುರಸ್ಕರಿಸಬಹುದು
ಡಿ) ಮೇಲ್ಮನವಿ ವಜಾ ಆಗತಕ್ಕದೆಂದು ನ್ಯಾಯಾಲಯವು ಆದೇಶವನ್ನು ಮಾಡಬಹುದು

Teachingninja.in

31 What is the maximum punishment prescribed under Section 18 of the Hindu Marriage Act, 1955 for contravention of Section 5 clause (iii) of Hindu Marriage Act?
A) with rigorous imprisonment which may extend to two years
B) with simple imprisonment which may extend to two years
C) with rigorous imprisonment which may extend to three years
D) with simple imprisonment which may extend to three years

ಹಿಂದೂ ವಿವಾಹ ಅದಿನಿಯಮ ಕಲಂ 5ರ ಖಂಡ(iii)ನ್ನು ಉಲ್ಲಂಘನೆ ಮಾಡಿದಕ್ಕೆ ಹಿಂದೂ ವಿವಾಹ ಕಾಯಿದೆ, 1955ರ ಕಲಂ 18ರ ಅಡಿಯಲ್ಲಿ ನಿಗದಿ ಪಡಿಸಿದ ಗರಿಷ್ಠ ಶಿಕ್ಷೆ ಯಾವುದು?
ಎ) ಎರಡು ವರ್ಷಗಳವರೆಗಿನ ಕಠಿಣ ಶಿಕ್ಷೆ
ಬಿ) ಎರಡು ವರ್ಷಗಳವರೆಗಿನ ಸಾಧಾರಣ ಶಿಕ್ಷೆ
ಸಿ) ಮೂರು ವರ್ಷಗಳವರೆಗಿನ ಕಠಿಣ ಶಿಕ್ಷೆ
ಡಿ) ಮೂರು ವರ್ಷಗಳವರೆಗಿನ ಸಾಧಾರಣ ಶಿಕ್ಷೆ

32 As per Section 2(b) of the State Financial Corporation Act, 1951, 'Financial Corporation' means
A) a financial corporation established under Section 3 only
B) a joint financial corporation established under Section 3A only
C) industrial concern only
D) both (A) and (B)

ರಾಜ್ಯ ಹಣಕಾಸು ನಿಗಮ ಅದಿನಿಯಮ, 1957ರ ಕಲಂ 2(ಬಿ) ಪ್ರಕಾರ 'ಹಣಕಾಸು ನಿಗಮ' ಎಂದರೆ
ಎ) ಕಲಂ 3ರ ಅಡಿಯಲ್ಲಿ ಸ್ಥಾಪನೆಯಾದ ಹಣಕಾಸು ನಿಗಮ ಮಾತ್ರ
ಬಿ) ಕಲಂ 3ಎ ಅಡಿಯಲ್ಲಿ ಸ್ಥಾಪನೆಯಾದ ಜಂಟಿ ಹಣಕಾಸು ನಿಗಮ ಮಾತ್ರ
ಸಿ) ಕೈಗಾರಿಕಾ ಉದ್ಯಮ ಸಂಸ್ಥೆ ಮಾತ್ರ
ಡಿ) (ಎ) ಮತ್ತು (ಬಿ) ಎರಡೂ

33 Section 10 of the Hindu Adoptions and Maintenance Act, 1956, provides for
A) persons capable of giving in adoption
B) persons capable of being taken in adoption
C) conditions which are to be complied with in every adoption
D) effects of adoption

ಹಿಂದೂ ದತ್ತಕ ಮತ್ತು ಜೀವನಾಂಶ ಅದಿನಿಯಮ, 1956ರ ಕಲಂ 10 ಉಪಬಂಧಿಸುವುದು
ಎ) ದತ್ತಕ ಕೊಡಲು ಸಮರ್ಥರಾದ ವ್ಯಕ್ತಿಗಳು
ಬಿ) ದತ್ತಕ ಹೊಂದಲು ಸಮರ್ಥವಿರುವ ವ್ಯಕ್ತಿಗಳು
ಸಿ) ಪ್ರತಿ ದತ್ತಕದಲ್ಲಿ ಈಡೇರಿಸಲು ಇರುವ ಷರತ್ತುಗಳು
ಡಿ) ದತ್ತಕದ ಪರಿಣಾಮಗಳು

34 The liability of surety
A) arises upon the death of the principal debtor
B) is joint and several

Teachingninja.in

C) arises only if the principal debtor has no means to pay
D) all the above

ಜಾಮೀನುದಾರನ ಹೊಣೆಗಾರಿಕೆಯು
ಎ) ಪ್ರಧಾನ ಋಣಿಯು ಮರಣ ಹೊಂದಿದಾಗ ಉದ್ಭವಿಸುವುದು
ಬಿ) ಜಂಟಿ ಮತ್ತು ಪ್ರತ್ಯೇಕ
ಸಿ) ಪ್ರಧಾನ ಋಣಿಗೆ ಪಾವತಿಸಲು ಮೂಲಗಳು ಇಲ್ಲದಾಗ ಮಾತ್ರ ಉದ್ಭವಿಸುವುದು
ಡಿ) ಮೇಲಿನ ಎಲ್ಲವೂ

35 'X', the wife of the 1st accused committed suicide within 7 years of marriage. During investigation, Investigation Officer finds that the Accused No.1 and his parents A2 and 3 were illtreating 'X' on the ground that she did not beget a child and after her marriage with A1 their family is financially ruined. Investigation Officer filed charge sheet against A1 to 3 for the offences under Section 498A and 306 r/w Section 34 of the Indian Penal Code. In such situation which of the following is the correct legal position?

A) since there was no allegation of harassment in connection with demand for dowry, Section 498A is not attracted

B) Since death was within 7 years of marriage, police would have filed charge sheet for offence under Section 304B of the Indian Penal Code and not under Section 306 of the Indian Penal Code and that itself shows that Section 498A of the Indian Penal Code is also not attracted

C) even though there is no allegation of dowry harassment, the allegations made against them attract Section 498A of the Indian Penal Code

D) without invoking the provisions of Dowry Prohibition Act, there cannot be a charge sheet for the offence punishable under Section 498A of the Indian Penal Code

1ನೇ ಆರೋಪಿಯ ಪತ್ನಿಯಾದ 'ಎಕ್ಸ್' ಮದುವೆಯಾದ ಏಳು ವರ್ಷಗಳ ಒಳಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ತನಿಖೆಯಲ್ಲಿ 1ನೇ ಆರೋಪಿ ಮತ್ತು ಅವನ ಹೆತ್ತವರಾದ 2 ಮತ್ತು 3ನೇ ಆರೋಪಿಗಳು ಆಕೆ ಮಗುವಿಗೆ ಜನ್ಮ ನೀಡಿಲ್ಲ ಮತ್ತು 1ನೇ ಆರೋಪಿ ಜೊತೆಗೆ ಆಕೆಯ ಮದುವೆ ನಂತರ ಅವರ ಕುಟುಂಬ ಆರ್ಥಿಕವಾಗಿ ವಿನಾಶವಾಗಿದೆ ಎಂದು ಆಕೆಗೆ ಕಿರುಕುಳ ನೀಡುತ್ತಿದ್ದರು ಎಂದು ತನಿಖಾಧಿಕಾರಿಗೆ ಕಂಡು ಬರುತ್ತದೆ. ತನಿಖಾಧಿಕಾರಿ 1 ರಿಂದ 3ನೇ ಆರೋಪಿತರ ವಿರುದ್ಧ ಭಾರತ ದಂಡ ಸಂಹಿತೆಯ ಕಲಂ 498ಎ ಮತ್ತು 306 ಸಹವಾಚಕ 34ರ ಅಡಿಯಲ್ಲಿ ದೋಷಾರೋಪಣ ಪತ್ರವನ್ನು ಸಲ್ಲಿಸುತ್ತಾರೆ. ಇಂತಹ ಸಂದರ್ಭದಲ್ಲಿ ಈ ಕೆಳಗಿನವುಗಳ ಪೈಕಿ ಕಾನೂನಿನಡಿಯಲ್ಲಿ ಯಾವುದು ಸರಿಯಾದ ಸ್ಥಿತಿ?

ಎ) ವರದಕ್ಷಿಣೆ ಕೇಳಿದ ಸಂಬಂಧ ಯಾವುದೇ ಆರೋಪ ಇಲ್ಲದೆ ಇರುವುದರಿಂದ ಕಲಂ 498ಎ ಆಕರ್ಷಿತವಾಗುವುದಿಲ್ಲ

Teachingninja.in

ಬಿ) ಮದುವೆಯಾಗಿ ಏಳು ವರ್ಷಗಳ ಒಳಗಡೆ ಮರಣ ಸಂಭವಿಸಿದ್ದರಿಂದ ಪೋಲೀಸರು ಭಾರತ ದಂಡ ಸಂಹಿತೆಯ 306 ಅಡಿಯಲ್ಲಿ ದೋಷಾರೋಪಣ ಪತ್ರ ಸಲ್ಲಿಸದೇ, ಕಲಂ 304ಬಿ ಅಡಿಯಲ್ಲಿ ಸಲ್ಲಿಸಬೇಕಾಗಿತ್ತು, ಆ ಸಂಗತಿಯೇ ಕಲಂ 498ಎ ಕೂಡ ಆಕರ್ಷಿತವಾಗುವುದಿಲ್ಲ ಎಂದು ತೋರಿಸಿಕೊಡುತ್ತದೆ

ಸಿ) ವರದಕ್ಷಿಣೆ ಕಿರುಕುಳ ಕೊಟ್ಟ ಬಗ್ಗೆ ಆರೋಪ ಇಲ್ಲದಿದ್ದರೂ ಕೂಡ ಅವರ ವಿರುದ್ಧ ಮಾಡಿದ ಆರೋಪದಿಂದ ಕಲಂ 498ಎ ಆಕರ್ಷಿತವಾಗುತ್ತದೆ

ಡಿ) ವರದಕ್ಷಿಣೆ ನಿಷೇಧ ಕಾಯಿದೆಯ ಉಪಬಂಧಗಳನ್ನು ಹಾಕದೆ ಇದ್ದುದರಿಂದ ಭಾರತ ದಂಡ ಸಂಹಿತೆಯ ಕಲಂ 498ಎ ಅಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧಕ್ಕಾಗಿ ದೋಷಾರೋಪಣ ಪತ್ರ ಬರುವುದಿಲ್ಲ

36 Under Article 71 of the Constitution of India all doubts and disputes arising out of or in connection with the election of a President of India shall be inquired into and decided by
A) Parliament
B) Chief Justice of India
C) Supreme Court of India
D) Speaker of Lok sabha

ರಾಷ್ಟ್ರಪತಿಯ ಚುನಾವಣೆಯಿಂದ ಅಥವಾ ಚುನಾವಣೆಗೆ ಸಂಬಂಧಿಸಿದಂತೆ ಉದ್ಭವಿಸುವ ಸಂದೇಹ ಮತ್ತು ವಿವಾದಗಳನ್ನು ಭಾರತ ಸಂವಿಧಾನದ ಅನುಚ್ಛೇದ 71ರ ಪ್ರಕಾರ ವಿಚಾರಣೆ ಮತ್ತು ತೀರ್ಮಾನ ಮಾಡಬೇಕಾಗಿರುವುದು
ಎ) ಸಂಸತ್ತು
ಬಿ) ಭಾರತದ ಮುಖ್ಯ ನ್ಯಾಯಮೂರ್ತಿ
ಸಿ) ಭಾರತದ ಸರ್ವೋಚ್ಚ ನ್ಯಾಯಾಲಯ
ಡಿ) ಲೋಕಸಭೆಯ ಸ್ಪೀಕರ್

37 In September 2018, Sikkim got its first Commercial Airport by name
A) Dodak
B) Dhoklam
C) Pakyong
D) Bagdogra

2018ರ ಸೆಪ್ಟಂಬರ್ ತಿಂಗಳಿನಲ್ಲಿ ಸಿಕ್ಕಿಂಗೆ ಸಿಕ್ಕಿದ ಅದರ ಮೊದಲ ವಾಣಿಜ್ಯ ವಿಮಾನ ನಿಲ್ದಾಣದ ಹೆಸರು
ಎ) ಧೋಡಕ್
ಬಿ) ಧೋಕಲಾಮ್
ಸಿ) ಪಾಕ್‌ಯ್ಯಾಂಗ್
ಡಿ) ಭಾಗ್‌ದೋರಾ

38 Any citizen of India can be appointed as a Judge of the Supreme Court, if
A) he has been a Judge of the High Court atleast for 3 years
B) he has been functioned as a Judicial Officer for a period of 10 years
C) he has been an Advocate for a minimum period of 7 years
D) he is, in the opinion of the President, a distinguished jurist

Teachingninja.in

ಭಾರತದ ಯಾವುದೇ ನಾಗರಿಕನನ್ನು ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಯಾಗಿ ನೇಮಕ ಮಾಡಬೇಕೆಂದರೆ
ಎ) ಅವನು ಉಚ್ಚ ನ್ಯಾಯಾಲಯದಲ್ಲಿ ಕನಿಷ್ಠ ಪಕ್ಷ ಮೂರು ವರ್ಷಗಳ ಕಾಲ ನ್ಯಾಯಮೂರ್ತಿಯಾಗಿರಬೇಕು
ಬಿ) ಅವನು ಹತ್ತು ವರ್ಷಗಳ ಕಾಲ ನ್ಯಾಯಿಕ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿರಬೇಕು
ಸಿ) ಅವನು ಕನಿಷ್ಠ ಏಳು ವರ್ಷಗಳ ಕಾಲ ನ್ಯಾಯವಾದಿಯಾಗಿರಬೇಕು
ಡಿ) ರಾಷ್ಟ್ರಪತಿಯ ಅಭಿಪ್ರಾಯದಲ್ಲಿ ಅವನು ಪ್ರಸಿದ್ಧ ನ್ಯಾಯಶಾಸ್ತ್ರಜ್ಞನಾಗಿರಬೇಕು

39 'Statue of Unity' is of
A) Mahatma Gandhiji
B) Sardar Vallabhai Patel
C) Subhash Chandra Bose
D) Veer Savarkar

'ಏಕತೆಯ ಪ್ರತಿಮೆ' ಯಾರದೆಂದರೆ
ಎ) ಮಹಾತ್ಮ ಗಾಂಧೀಜಿಯವರದು
ಬಿ) ಸರ್ದಾರ್ ವಲ್ಲಭಬಾಯ್ ಪಟೇಲ್‌ರವರದು
ಸಿ) ಸುಭಾಷ್ ಚಂದ್ರ ಬೋಸ್‌ರವರದು
ಡಿ) ವೀರ್ ಸಾವರ್‌ಕರ್‌ರವರದು

40 Which of the following sections of the Code of Criminal Procedure, 1973 mandates that compensation payable by the State Government under section 357A shall be in addition to the payment of fine to the victim under section 326A or section 376D of the Indian Penal Code?
A) proviso to Section 357
B) proviso to Section 357A
C) Section 357B
D) none of the above

ಭಾರತ ದಂಡ ಸಂಹಿತೆಯ ಕಲಂ 326ಎ ಅಥವಾ 376ಡಿ ಅಡಿಯಲ್ಲಿ ಸಂತ್ರಸ್ತೆಗೆ ದಂಡ ಪಾವತಿಸಲು ಮಾಡಿದ ಆದೇಶ ಅಪರಾಧ ಪ್ರಕ್ರಿಯಾ ಸಂಹಿತೆ, ಕಲಂ 357ಎ ಅಡಿಯಲ್ಲಿ ರಾಜ್ಯ ಸರ್ಕಾರ ಪಾವತಿಸಬೇಕಾದ ಪರಿಹಾರಕ್ಕೆ ಸೇರಿಸತಕ್ಕುದು ಎಂದು ಆದೇಶ ಮಾಡಲು ಇರುವಂತ ಅಪರಾಧ ಪ್ರಕ್ರಿಯಾ ಸಂಹಿತೆಯ ಈ ಕೆಳಗಿನವುಗಳಲ್ಲಿ ಯಾವ ಕಲಂ ಆಗಿರುತ್ತದೆ?
ಎ) ಕಲಂ 357
ಬಿ) ಕಲಂ 357ಎ
ಸಿ) ಕಲಂ 357ಬಿ
ಡಿ) ಮೇಲಿನ ಯಾವುದೂ ಅಲ್ಲ

41 Which of the following High Court has jurisdiction over more than one State/Union Territory?
A) Mumbai
B) Guwahati
C) Kolkata
D) Chandigarh

Teachingninja.in

ಈ ಕೆಳಗಿನ ಯಾವ ಉಚ್ಚ ನ್ಯಾಯಾಲಯ ಒಂದು ರಾಜ್ಯ/ಕೇಂದ್ರ ಆಡಳಿತ ಪ್ರದೇಶಕಿಂತ ಜಾಸ್ತಿ ಅಧಿಕಾರ ವ್ಯಾಪ್ತಿ ಇರುತ್ತದೆ?
ಎ) ಮುಂಬಯಿ
ಬಿ) ಗೌಹಾಟಿ
ಸಿ) ಕೊಲ್ಕತ್ತ
ಡಿ) ಚಂದಿಗರ್ಢ

42 Preventive detention' means
A) detention for interrogation
B) detention after interrogation
C) detention without interrogation
D) detention for cognizable offence

'ಪ್ರತಿಬಂಧಕ ಬಂಧನ'ದ ಅರ್ಥ
ಎ) ವಿಚಾರಣೆಗಾಗಿ ಬಂಧನ
ಬಿ) ವಿಚಾರಣೆ ನಂತರ ಬಂಧನ
ಸಿ) ವಿಚಾರಣೆ ಇಲ್ಲದೆ ಬಂಧನ
ಡಿ) ಸಂಜ್ಞೇಯ ಅಪರಾಧಕ್ಕಾಗಿ ಬಂಧನ

43 Test identification parade pertains to the field of:
A) Investigation
B) Trial
C) satisfaction of I.O. that he is proceeding in right direction
D) both (A) and (B) above

ಗುರುತು ಪತ್ತೆ ಕವಾಯತು ಸಂಬಂಧಿಸಿದ ಕ್ಷೇತ್ರ
ಎ) ತನಿಖೆ
ಬಿ) ಅಧಿವಿಚಾರಣೆ
ಸಿ) ಸರಿಯಾದ ದಿಕ್ಕಿನಲ್ಲಿ ಹೋಗುತ್ತಿದ್ದಾನೆಂದು ತನಿಖಾಧಿಕಾರಿಗೆ ತೃಪ್ತಿಯಾದಾಗ
ಡಿ) ಮೇಲಿನ (ಎ) ಮತ್ತು (ಬಿ) ಎರಡೂ

44 Which of the following is the correct legal position?

A) if a charge sheet is filed for an offence under Section 302 of the Indian Penal Code against a child in conflict with law who is below the age of 16 years, then in view of Section 27 of the Code of Criminal Procedure, case has to be tried by the Court of Sessions only

B) charge sheet has to be filed before the Juvenile Justice Board and the Board has to pass an order of commital of such a case to the Court of Sessions

C) charge sheet has to be filed in such a case directly before the children's Court

D) none of the above

Teachingninja.in

ಈ ಕೆಳಗಿನವುಗಳಲ್ಲಿ ಯಾವುದು ಸರಿಯಾದ ಕಾನೂನಿನ ಸ್ಥಿತಿ?

ಎ) ಕಾನೂನಿನ ಸಂಘರ್ಷಕ್ಕೆ ಒಳಗಾದ 16 ವರ್ಷಕ್ಕಿಂತ ಕೆಳಗಿನ ವಯಸ್ಸಿನ ಮಗುವು ಭಾರತ ದಂಡ ಸಂಹಿತೆ, ಕಲಂ 302ರ ಅಡಿಯಲ್ಲಿ ಅಪರಾಧ ಮಾಡಿದಕ್ಕೆ ದೋಷಾರೋಪಣ ಪತ್ರ ಸಲ್ಲಿಸಿದಾಗ ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ 27ರಂತೆ ಸೆಷನ್ಸ್ ನ್ಯಾಯಾಲಯ ಆ ಪ್ರಕರಣವನ್ನು ಅಧಿವಿಚಾರಣೆ ಮಾಡಬೇಕು

ಬಿ) ಬಾಲನ್ಯಾಯ ಮಂಡಳಿಯ ಮುಂದೆ ದೋಷಾರೋಪಣ ಪತ್ರ ಸಲ್ಲಿಸಬೇಕು ಮತ್ತು ನಂತರ ಸೆಷನ್ಸ್ ನ್ಯಾಯಾಲಯಕ್ಕೆ ಪ್ರಕರಣವನ್ನು ಕಮಿಟಲ್ ಮಾಡಲು ಬಾಲನ್ಯಾಯ ಮಂಡಳಿ ಆದೇಶ ಮಾಡಬೇಕು

ಸಿ) ಮಕ್ಕಳ ನ್ಯಾಯಾಲಯದ ಮುಂದೆ ನೇರವಾಗಿ ದೋಷಾರೋಪಣ ಪತ್ರ ಸಲ್ಲಿಸಬೇಕು

ಡಿ) ಮೇಲಿನ ಯಾವುದೂ ಅಲ್ಲ

45 Who was the first Chief Justice of India?
A) Justice H.J.Kania
B) Justice M.C.Setalvad
C) Justice Muthuswamy Iyer
D) None of the above

ಭಾರತದ ಮೊದಲ ಮುಖ್ಯ ನ್ಯಾಯಮೂರ್ತಿ ಯಾರು?
ಎ) ನ್ಯಾಯಮೂರ್ತಿ ಹೆಚ್.ಜೆ.ಕಾನಿಯ
ಬಿ) ನ್ಯಾಯಮೂರ್ತಿ ಸೆಟಲ್‌ವಾಡ್
ಸಿ) ನ್ಯಾಯಮೂರ್ತಿ ಮುತ್ತುಸ್ವಾಮಿ ಐಯ್ಯರ್
ಡಿ) ಮೇಲಿನ ಯಾವುದು ಅಲ್ಲ

46 A Dumb witness gives his evidence in writing, the same shall be
A) secondary evidence
B) deemed to be oral evidence
C) cannot be considered as evidence
D) considered as documentary evidence

ಮೂಕ ಸಾಕ್ಷಿ ಸಾಕ್ಷ್ಯವನ್ನು ಬರವಣಿಗೆ ಮೂಲಕ ಕೊಟ್ಟಾಗ, ಅದು
ಎ) ದ್ವಿತೀಯಕ ಸಾಕ್ಷ್ಯವಾಗಿರುತ್ತದೆ
ಬಿ) ಪರಿಗಣಿತ ಮೌಖಿಕ ಸಾಕ್ಷ್ಯವಾಗಿರುತ್ತದೆ
ಸಿ) ಸಾಕ್ಷ್ಯವೆಂದು ಪರಿಗಣಿಸಲುಬಾರದು
ಡಿ) ದಸ್ತಾವೇಜಿಯ ಸಾಕ್ಷ್ಯವೆಂದು ಪರಿಗಣಿಸಬಹುದು

47 In which of the following cases, the Supreme Court has directed that erring prosecution and investigation officers must be proceeded against in the case of unmerited acquittals and wrongful convictions?
A) Hardeep Sing Vs State of Punjab
B) Mohd Shafi Vs Mohd Rafiq
C) State of Gujarat Vs Kishanbai and others
D) None of the above

Teachingninja.in

ಗುಣಾಂಶಗಳಿಲ್ಲದ ಖುಲಾಸೆ ಮತ್ತು ದೋಷಪೂರಿತ ಅಪರಾಧ ನಿರ್ಣಯಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥ ಅಭಿಯೋಜನೆ ಮತ್ತು ತನಿಖಾಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸರ್ವೋಚ್ಚ ನ್ಯಾಯಾಲಯ ಈ ಕೆಳಕಂಡ ಯಾವ ಪ್ರಕರಣದಲ್ಲಿ ನಿರ್ದೇಶಿಸಲಾಗಿದೆ?
ಎ) ಹರ್‌ದೀಪ್ ಸಿಂಗ್ ವಿರುದ್ಧ ಸ್ಟೇಟ್ ಆಫ್ ಪಂಜಾಬ್
ಬಿ) ಮೊಹಮ್ಮದ್ ಶಫಿ ವಿರುದ್ಧ ಮೊಹಮ್ಮದ್ ರಫೀಕ್
ಸಿ) ಸ್ಟೇಟ್ ಆಫ್ ಗುಜರಾತ್ ವಿರುದ್ಧ ಕಿಶನ್‌ಭಾಯಿ ಮತ್ತು ಇತರರು
ಡಿ) ಮೇಲಿನ ಯಾವುದೂ ಅಲ್ಲ

48 Which of the following is the correct position of law with reference to the presumption under Section 35 of the Narcotic Drugs and Psychotropic Substances Act?
A) it is a rebuttable presumption
B) it is a irrebuttable presumption
C) the Court may or may not draw the presumption and not bound to draw the same
D) presumption of probability and proof beyond reasonable doubt is not sufficient for the accused to rebut the presumption

ಮಾಧಕ ದ್ರವ್ಯ ಮತ್ತು ಮನೋವಿಕೃತ ವಸ್ತುಗಳ ಅಧಿನಿಯಮದ ಕಲಂ 35ರಡಿಯಲ್ಲಿನ ಪೂರ್ವಭಾವನೆಯನ್ನು ಉಲ್ಲೇಖಿಸಿ ಈ ಕೆಳಗಿನವುಗಳಲ್ಲಿ ಯಾವುದು ಸರಿಯಾದ ಕಾನೂನಿನ ಸ್ಥಿತಿ?
ಎ) ಅದು ಅಲ್ಲಗಳೆಯಬಹುದಾದ ಪೂರ್ವಭಾವನೆ
ಬಿ) ಅದು ಅಲ್ಲಗಳೆಯಲಾಗದ ಪೂರ್ವಭಾವನೆ
ಸಿ) ನ್ಯಾಯಾಲಯ ಪೂರ್ವಭಾವನೆಗಳನ್ನು ತಳೆಯಬಹುದು ಅಥವಾ ತಳೆಯದೇ ಇರಬಹುದು ಮತ್ತು ತಳೆಯಬೇಕೆಂದು ಏನೂ ಇಲ್ಲ
ಡಿ) ಸಂಭವನೀಯತೆಯ ಪೂರ್ವಭಾವನೆ ಮತ್ತು ಪೂರ್ವಭಾವನೆ ಅಲ್ಲಗಳೆಯಲು ಆರೋಪಿಯು ಯುಕ್ತ ಸಂಶಯಾತೀತವಾಗಿ ರುಜುವಾತು ಮಾಡುವುದು ಸಾಕಾಗುವುದಿಲ್ಲ

49 Nothing in Section 438 of the Code of Criminal Procedure, 1973, shall apply to any case involving the arrest of any person on accusation of having committed an offence
A) Section 489A of the Indian Penal Code
B) Section 376A of the Indian Penal Code
C) Section 326A of the Indian Penal Code
D) Section 376AB of the Indian Penal Code

________ ಅಪರಾಧದ ಆಪಾದನೆಗೊಳಗಾದ ವ್ಯಕ್ತಿಯ ದಸ್ತಗಿರಿ ಕುರಿತಂತೆ ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 438 ಅನ್ವಯವಾಗುವುದಿಲ್ಲ
ಎ) ಭಾರತ ದಂಡ ಸಂಹಿತೆಯ, ಕಲಂ 489ಎ
ಬಿ) ಭಾರತ ದಂಡ ಸಂಹಿತೆಯ, ಕಲಂ 376ಎ
ಸಿ) ಭಾರತ ದಂಡ ಸಂಹಿತೆಯ, ಕಲಂ 326ಎ
ಡಿ) ಭಾರತ ದಂಡ ಸಂಹಿತೆಯ, ಕಲಂ 376ಎಬಿ

Teachingninja.in

50 Who among the following won Gold Medal at the Gymnastics World Challenge Cup held at Mersin, Turkey
A) Symone Biles
B) Dipa Karmakar
C) Saina Nehwal
D) P.V.Sindhu

ಈ ಕೆಳಗಿನವರ ಪೈಕಿ ಯಾರು ಟರ್ಕಿಯ ಮರ್ಸಿನ್‌ನಲ್ಲಿ ನಡೆದ ವಿಶ್ವ ಜಿಮ್ನಾಸ್ಟಿಕ್ ಚಾಲೆಂಜ್ ಕಪ್‌ನಲ್ಲಿ ಚಿನ್ನದ ಪದಕವನ್ನು ಜಯಿಸಿದವರು?
ಎ) ಸೈಮೋನ್ ಬೈಲ್ಸ್
ಬಿ) ದೀಪ ಕರ್ಮಾಕರ್
ಸಿ) ಸೈನ ನೆಹ್ವಾಲ್
ಡಿ) ಪಿ.ವಿ.ಸಿಂಧು

51 Perpetual Injunction can be granted
A) at any stage of the suit
B) only after hearing on merit by decree
C) at the discretion of the Court
D) both (A) and (B)

ಶಾಶ್ವತ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡಲು ಶಕ್ಯವಿರುವುದು
ಎ) ದಾವೆಯ ಯಾವುದೇ ಹಂತದಲ್ಲಿ
ಬಿ) ಗುಣಾಂಶಗಳ ಮೇಲೆ ಸುನಾವಣೆ ಮಾಡಿದ ನಂತರ ಡಿಕ್ರಿಯ ಮೂಲಕ
ಸಿ) ನ್ಯಾಯಾಲಯದ ವಿವೇಚನೆಯ ಪ್ರಕಾರ
ಡಿ) (ಎ) ಮತ್ತು (ಬಿ) ಎರಡೂ

52 As per the Indian Contract Act, a proposal when accepted becomes
A) promise under Section 2(b)
B) agreement under Section 2(e)
C) contract under Section 2(h)
D) none of the above

ಭಾರತೀಯ ಕರಾರು ಅಧಿನಿಯಮದ ಪ್ರಕಾರ ಪ್ರಸ್ತಾವನೆಯನ್ನು ಒಪ್ಪಿದಾಗ ________ ಉಂಟಾಗುವುದು
ಎ) ಕಲಂ 2(ಬಿ) ಅಡಿಯಲ್ಲಿ ವಾಗ್ದಾನ
ಬಿ) ಕಲಂ 2(ಇ) ಅಡಿಯಲ್ಲಿ ಒಪ್ಪಂದ
ಸಿ) ಕಲಂ 2(ಹೆಚ್) ಅಡಿಯಲ್ಲಿ ಕರಾರು
ಡಿ) ಮೇಲಿನ ಯಾವುದೂ ಅಲ್ಲ

53 Governor of Reserve Bank of India is
A) Urjit Patel
B) Shaktikanta Das
C) Raghuram Rajan
D) Ajaynarayan Jha

Teachingninja.in

ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್
ಎ) ಉರ್ಜಿತ್ ಪಟೇಲ್
ಬಿ) ಶಕ್ತಿಕಾಂತ ದಾಸ್
ಸಿ) ರಘುರಾಮ್ ರಾಜನ್
ಡಿ) ಅಜಯ್‌ನಾರಾಯಣ್ ಜ್ಞಾ

54 If any offence under the Protection of Children from Sexual offences Act, 2012 is committed by a child, such child shall be
A) tried by the Jurisdictional JMFC
B) tried by Chief Judicial Magistrate
C) tried by Special Courts under the POCSO Act
D) dealt with under the Juvenile Justice (Care and Protection of Children) Act, 2015

ಲೈಂಗಿಕ ಅಪರಾಧದಿಂದ ಮಕ್ಕಳ ರಕ್ಷಣಾ ಅಧಿನಿಯಮದ ಅಡಿಯಲ್ಲಿ ಮಗು ಅಪರಾಧ ಮಾಡಿದ ಆರೋಪಕ್ಕೊಳಗಾದ ಮಗುವನ್ನು
ಎ) ಅಧಿಕಾರ ವ್ಯಾಪ್ತಿಯುಳ್ಳ ಜೆ.ಎಂ.ಎಫ್.ಸಿ. ಅಧಿವಿಚಾರಣೆ ಮಾಡಬೇಕು
ಬಿ) ಮುಖ್ಯನ್ಯಾಯಿಕ ದಂಡಾಧಿಕಾರಿ ಅಧಿವಿಚಾರಣೆ ಮಾಡಬೇಕು
ಸಿ) ಪೋಕ್ಸೋ ಅಧಿನಿಯಮದ ವಿಶೇಷ ನ್ಯಾಯಾಲಯ ಅಧಿವಿಚಾರಣೆ ಮಾಡಬೇಕು
ಡಿ) ಬಾಲನ್ಯಾಯ (ಆರೈಕೆ ಮತ್ತು ಮಕ್ಕಳ ರಕ್ಷಣಾ) ಅಧಿನಿಯಮ, 2015 ಅಧಿವಿಚಾರಣೆ ಮಾಡಬೇಕು

55 Under Section 5 of the Transfer of Property Act, 1882, 'living person' includes
A) a Company only
B) assosication only
C) body of individuals only
D) all the above

ಸ್ವತ್ತು ವರ್ಗಾವಣೆ ಅಧಿನಿಯಮ, 1882ರ ಕಲಂ 5ರ ಅಡಿಯಲ್ಲಿ 'ಜೀವಂತ ವ್ಯಕ್ತಿ' ಎಂಬುವುದು
ಎ) ಕಂಪನಿ ಮಾತ್ರ
ಬಿ) ಸಂಘ ಮಾತ್ರ
ಸಿ) ವ್ಯಕ್ತಿಗಳ ನಿಕಾಯ ಮಾತ್ರ
ಡಿ) ಮೇಲಿನ ಎಲ್ಲವೂ

56 A group D employee of a Court is prosecuted for the offence of criminal breach of trust. The case of the prosecution is that he was asked to credit to the treasury the amount of fine collected in criminal cases on the previous day, he did not credit the amount on the next day, but credited the same after the presiding officer conducting a preliminary enquiry.

In the fact situation which of the following is a tenable defence?

A) that the accused being only a group D employee cannot be said to have been entrusted with the fine amount. Therefore, he is not guilty of the said offence

Teachingninja.in

B) since accused subsequently credited the fine amount, he cannot be said to have committed the offence of criminal breach of trust

C) departmental enquiry also having been initiated against him, criminal prosecution would amounts to double jeopardy

D) none of the above

ನ್ಯಾಯಾಲಯದ ಗ್ರೂಪ್ ಡಿ ನೌಕರನು ಅಪರಾಧಿಕ ನಂಬಿಕೆ ದ್ರೋಹದ ಅಪರಾಧಕ್ಕಾಗಿ ಅಭಿಯೋಜನೆಗೊಳಿಸಲ್ಪಟ್ಟಿದ್ದಾನೆ. ಅಭಿಯೋಜನೆಯ ಪ್ರಕಾರ ಅಪರಾಧಿಯು ಪ್ರಕರಣಗಳಲ್ಲಿ ಹಿಂದಿನ ದಿನ ಸಂಗ್ರಹಿಸಿದ ದಂಡವನ್ನು ಖಜಾನೆಗೆ ಕಟ್ಟಲು ಹೇಳಿದಾಗಲು ಆ ಪ್ರಕಾರ ಕಟ್ಟದೇ ಪೀಠಾಧಿಕಾರಿ ಪ್ರಾಥಮಿಕ ವಿಚಾರಣೆಯನ್ನು ನಡೆಸಿದ ನಂತರ, ಅದರ ಮರುದಿನ ಹಣವನ್ನು ಕಟ್ಟುತ್ತಾನೆ.
ಈ ಸಂಗತಿಗೆ ಅನುಗುಣವಾಗಿ ಈ ಕೆಳಗಿನವುಗಳಲ್ಲಿ ಯಾವ ರಕ್ಷಣಾತ್ಮಕ-ವಾದ ಸಮರ್ಥನೀಯವಾಗುತ್ತದೆ?

ಎ) ಆರೋಪಿ ಗ್ರೂಪ್ ಡಿ ನೌಕರನಾಗಿದ್ದರಿಂದ ದಂಡದ ಹಣವನ್ನು ವಹಿಸಿಕೊಟ್ಟಿದ್ದಾರೆಂದು ಹೇಳಲಾಗುವುದಿಲ್ಲ ಆದ್ದರಿಂದ ಅವನು ಸದರಿ ಅಪರಾಧದ ತಪ್ಪಿತಸ್ಥನಲ್ಲ

ಬಿ) ಆರೋಪಿ ತದನಂತರ ದಂಡದ ಹಣವನ್ನು ತುಂಬಿದ್ದರಿಂದ ಅವನು ಅಪರಾಧಿಕ ನಂಬಿಕೆ ದ್ರೋಹ ಅಪರಾಧವನ್ನು ಮಾಡಿದ್ದಾನೆಂದು ಹೇಳಲಾಗುವುದಿಲ್ಲ

ಸಿ) ಆತನ ವಿರುದ್ಧ ಇಲಾಖಾ ವಿಚಾರಣೆಯನ್ನು ಕೂಡ ಪ್ರಾರಂಭಿಸಿದ್ದರಿಂದ ಅಪರಾಧಿಕ ಅಭಿಯೋಜನೆಯು ಇಮ್ಮಡಿ ವಿಪತ್ತಾಗುತ್ತದೆ

ಡಿ) ಮೇಲಿನ ಯಾವುದೂ ಅಲ್ಲ

57 Under Section 8 of the Hindu Minority and Guardianship Act, 1956, natural guardian

A) can mortgage or transfer by sale of the immovable property of the minor without the permission of the Court

B) can lease any part of property of the minor for any period

C) can mortgage or transfer by sale of the immovable property of the minor with the previous permission of the Court

D) both (B) and (C)

ಹಿಂದೂ ಅಪ್ರಾಪ್ತ ವಯಸ್ಕತೆ ಮತ್ತು ಸಂರಕ್ಷಣೆ ಅದಿನಿಯಮ, 1956ರ ಕಲಂ 8ರ ಅಡಿಯಲ್ಲಿ ಸ್ವಾಭಾವಿಕ ಸಂರಕ್ಷಕನು

ಎ) ಅಪ್ರಾಪ್ತ ವಯಸ್ಕರ ಸ್ಥಿರ ಸ್ವತ್ತನ್ನು ನ್ಯಾಯಾಲಯದ ಅನುಮತಿ ಇಲ್ಲದೆಯೇ ಅಡಮಾನ ಅಥವಾ ಮಾರಾಟದ ಮೂಲಕ ವರ್ಗಾವಣೆ ಮಾಡಬಹುದು

ಬಿ) ಅಪ್ರಾಪ್ತ ವಯಸ್ಕರ ಯಾವುದೇ ಭಾಗಶಃ ಸ್ವತ್ತನ್ನು ಯಾವುದೇ ಅವಧಿಗೆ ಗೇಣಿ ಮಾಡಬಹುದು

ಸಿ) ಅಪ್ರಾಪ್ತ ವಯಸ್ಕರ ಸ್ಥಿರ ಸ್ವತ್ತನ್ನು ನ್ಯಾಯಾಲಯದ ಪೂರ್ವಾನುಮತಿ ಮೇರೆಗೆ ಅಡಮಾನ ಅಥವಾ ಮಾರಾಟದ ಮೂಲಕ ವರ್ಗಾವಣೆ ಮಾಡಬಹುದು

ಡಿ) (ಬಿ) ಮತ್ತು (ಸಿ) ಎರಡೂ

Teachingninja.in

58 When a charge sheet is filed against X and Y, of whom X is an adult and Y is a child

A) in view of Section 223 of the Code of Criminal Procedure, both X and Y can be jointly tried by the Jevenile Justice Board

B) Both X and Y can be tried by the regular Court, only if Section 34 of the Indian Penal Code is invoked

C) if the offence alleged is triable by a Court of Sessions, then both X and Y has to be tried by the Court of Sessions

D) Y cannot be tried with X

ಎಕ್ಸ್ ಮತ್ತು ವೈ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಿದಾಗ ಎಕ್ಸ್ ವಯಸ್ಕನಾಗಿದ್ದು ಮತ್ತು ವೈ ಮಗುವಾಗಿದ್ದರೆ

ಎ) ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ 223ರ ಪ್ರಕಾರ ಎಕ್ಸ್ ಮತ್ತು ವೈ ಯವರನ್ನು ಜೊತೆಯಾಗಿ ಬಾಲನ್ಯಾಯ ಮಂಡಳಿಯಲ್ಲಿ ಅಧಿವಿಚಾರಣೆ ಮಾಡಬಹುದು

ಬಿ) ಭಾರತ ದಂಡ ಸಂಹಿತೆ ಕಲಂ 34ನ್ನು ಅನ್ವಯಿಸಿ ಎಕ್ಸ್ ಮತ್ತು ವೈ ಯವರನ್ನು ಸಾಮಾನ್ಯ ನ್ಯಾಯಾಲಯದಲ್ಲಿ ಅಧಿವಿಚಾರಣೆ ಮಾಡಬಹುದು

ಸಿ) ಸೆಷನ್ಸ್ ನ್ಯಾಯಾಲಯದಲ್ಲಿ ಅಧಿವಿಚಾರಣೆಗೊಳಪಡುವ ಅಪರಾಧವಾಗಿದ್ದರೆ, ಎಕ್ಸ್ ಮತ್ತು ವೈ ಯವರನ್ನು ಸೆಷನ್ಸ್ ನ್ಯಾಯಾಲಯದಲ್ಲಿ ಅಧಿವಿಚಾರಣೆ ಮಾಡಬಹುದು

ಡಿ) ವೈ ಯವರನ್ನು ಎಕ್ಸ್ ಜೊತೆಗೆ ಅಧಿವಿಚಾರಣೆ ಮಾಡಲಾಗುವುದಿಲ್ಲ

59 Bogibeel, India's longest rail-cum-road bridge built over the Brahmaputra river Connects
A) Assam and Meghalaya
B) Assam and Nagaland
C) Assam and Arunachal Pradesh
D) Meghalaya and Nagaland

ಬ್ರಹ್ಮಪುತ್ರ ನದಿಯ ಮೇಲೆ ನಿರ್ಮಿಸಲಾಗಿರುವ ಭಾರತದ ಉದ್ದನೆಯ ರೈಲು ಸಹಿತ ರಸ್ತೆ ಸೇತುವೆ ಬೋಗಿಬೀಲ್ ಸಂಪರ್ಕಿಸುವುದು
ಎ) ಅಸ್ಸಾಂ ಮತ್ತು ಮೇಘಾಲಯವನ್ನು
ಬಿ) ಅಸ್ಸಾಂ ಮತ್ತು ನಾಗಲ್ಯಾಂಡ್‌ವನ್ನು
ಸಿ) ಅಸ್ಸಾಂ ಮತ್ತು ಅರುಣಾಚಲ ಪ್ರದೇಶವನ್ನು
ಡಿ) ಮೇಘಾಲಯ ಮತ್ತು ನಾಗಲ್ಯಾಂಡನ್ನು

60 Under the Code of Criminal Procedure, a charge shall be written in the language
A) which accused understands
B) which witness understands
C) of the court
D) Hindi language

Teachingninja.in

ಅಪರಾಧ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿ ದೋಷಾರೋಪಣೆಯನ್ನು ಬರೆಯತಕ್ಕಂತ ಭಾಷೆಯು
ಎ) ಆರೋಪಿಗೆ ಅರ್ಥವಾಗುವುದಾಗಿರಬೇಕು
ಬಿ) ಸಾಕ್ಷಿಗೆ ಅರ್ಥವಾಗುವುದಾಗಿರಬೇಕು
ಸಿ) ನ್ಯಾಯಾಲಯದ ಭಾಷೆಯಾಗಿರಬೇಕು
ಡಿ) ಹಿಂದಿ ಭಾಷೆಯಾಗಿರಬೇಕು

61 The sentence of imprisonment in default of payment of fine

A) shall not exceed 1/4 of the term of imprisonment which the Magistrate is competent to impose only

B) shall not exceed the power of the Magistrate under Section 29 of the Code of Criminal Procedure only

C) both (A) and (B) above

D) none of the above

ಆರೋಪಿಯು ದಂಡ ಪಾವತಿಸಲು ವಿಫಲನಾದಾಗ ಕೊಡುವ ಶಿಕ್ಷೆಯ ಪ್ರಮಾಣ

ಎ) ಮ್ಯಾಜಿಸ್ಟ್ರೇಟರು ಕಾನೂನಿನಡಿಯಲ್ಲಿ ವಿಧಿಸಬಹುದಾಗಿರುವ ಶಿಕ್ಷೆಯ 1/4 ಪ್ರಮಾಣವನ್ನು ಮೀರದಂತೆ ಮಾತ್ರ

ಬಿ) ಅಪರಾಧ ಪ್ರಕ್ರಿಯಾ ಸಂಹಿತೆ, ಕಲಂ 29ರಡಿಯಲ್ಲಿ ಮ್ಯಾಜಿಸ್ಟ್ರೇಟ್‌ರವರಿಗೆ ದತ್ತವಾಗಿರುವ ಅಧಿಕಾರವನ್ನು ಮೀರದಂತೆ ಮಾತ್ರ

ಸಿ) ಮೇಲಿನ (ಎ) ಮತ್ತು (ಬಿ) ಎರಡೂ

ಡಿ) ಮೇಲಿನ ಯಾವುದು ಅಲ್ಲ

62 If the Court finds that it has no pecuniary or territorial jurisdiction to try the suit, the proper course for the court would be
A) to dismiss the suit
B) to transfer the suit
C) to return the plaint for presentation before the proper Court
D) to direct the plaintiff to withdraw the suit

ದಾವೆಯನ್ನು ಅಧಿವಿಚಾರಣೆ ಮಾಡಲು ಆರ್ಥಿಕ ಅಥವಾ ಪ್ರಾದೇಶಿಕ ಅಧಿಕಾರ ವ್ಯಾಪ್ತಿ ತನಗೆ ಇಲ್ಲವೆಂದು ನ್ಯಾಯಾಲಯಕ್ಕೆ ಮನವರಿಕೆಯಾದರೆ ನ್ಯಾಯಾಲಯ ತೆಗೆದುಕೊಳ್ಳಬೇಕಾದ ಸರಿಯಾದ ಕ್ರಮವೆಂದರೆ
ಎ) ದಾವೆಯನ್ನು ತಿರಸ್ಕರಿಸುವುದು
ಬಿ) ದಾವೆಯನ್ನು ವರ್ಗಾಯಿಸುವುದು
ಸಿ) ಸಮರ್ಪಕ ನ್ಯಾಯಾಲಯದಲ್ಲಿ ಹಾಜರು ಪಡಿಸಲು ವಾದ ಪತ್ರವನ್ನು ಹಿಂತಿರುಗಿಸುವುದು
ಡಿ) ದಾವೆಯನ್ನು ವಾಪಸ್ಸು ತೆಗೆದುಕೊಳ್ಳಲು ವಾದಿಗೆ ನಿರ್ದೇಶಿಸುವುದು

63 Section 19 of the Hindu Adoptions and Maintenance Act, 1956, provides for maintenance of
A) wife
B) children
C) parents
D) widowed daughter-in-law

Teachingninja.in

ಹಿಂದೂ ದತ್ತಕ ಮತ್ತು ಜೀವನಾಂಶ ಅದಿನಿಯಮ, 1956ರ ಕಲಂ 19 __________ ರವರ ಜೀವನಾಂಶವನ್ನು ಉಪಬಂಧಿಸುವುದು
ಎ) ಪತ್ನಿ
ಬಿ) ಮಕ್ಕಳು
ಸಿ) ಹೆತ್ತವರು
ಡಿ) ವಿಧವೆ ಸೊಸೆ

64 Which of the following section of the Indian Evidence Act, 1872 contains a totally irrebuttable presumption?
A) Section 41
B) Section 113A
C) Section 112
D) both (A) and (B)

ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಈ ಕೆಳಗಿನ ಯಾವ ಕಲಂ ಪೂರ್ಣ ಅಲ್ಲಗಳೆಯಲಾಗದ ಪೂರ್ವಭಾವನೆ?
ಎ) ಕಲಂ 41
ಬಿ) ಕಲಂ 113ಎ
ಸಿ) ಕಲಂ 112
ಡಿ) (ಎ) ಮತ್ತು (ಬಿ) ಎರಡೂ

65 A special Court constituted for the trial of the offences under the Scheduled Caste and Scheduled Tribes (Prevention of Atrocities) Act, 1989

A) cannot take cognizance of the offence under the said Act without it being committed by the jurisdictional magistrate

B) can take cognizance directly for the offence punishable under the said Act

C) can take cognizance directly only if in addition to the offence under the said Act, an offence triable by a Court of sessions is also alleged to have been committed by the accused

D) can take cognizance directly only if in addition to the offence under the said Act, an offence under POCSO Act is also alleged to have been committed by the accused

ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ, 1989 ಅಡಿಯಲ್ಲಿನ ಅಪರಾಧಗಳ ವಿಚಾರಣೆಗಾಗಿ ಸ್ಥಾಪಿತವಾದ ವಿಶೇಷ ನ್ಯಾಯಾಲಯವು

ಎ) ನ್ಯಾಯಾಧಿಕಾರ ವ್ಯಾಪ್ತಿಯುಳ್ಳ ದಂಡಾಧಿಕಾರಿ ಪ್ರಕರಣವನ್ನು ಕಮಿಟ್ ಮಾಡದೇ ಸಂಜ್ಞೇಯ ತೆಗೆದುಕೊಳ್ಳಲು ಬರುವುದಿಲ್ಲ

ಬಿ) ವಿಶೇಷ ನ್ಯಾಯಾಲಯ ನೇರವಾಗಿ ಸಂಜ್ಞೇಯವನ್ನು ತೆಗೆದುಕೊಳ್ಳಬಹುದು

Teachingninja.in

ಸಿ) ಸದರಿ ಅಧಿನಿಯಮದ ಅಡಿಯಲ್ಲಿಯ ಅಪರಾಧದ ಜೊತೆಗೆ ಸತ್ರ ನ್ಯಾಯಾಲಯದಿಂದ ಅಧಿವಿಚಾರಣೆಗೊಳಪಡಬಹುದಾದಂತ ಅಪರಾಧವನ್ನು ಒಳಗೊಂಡಿದ್ದರೆ ಮಾತ್ರ ನೇರವಾಗಿ ಸಂಜ್ಞೇಯ ತೆಗೆದುಕೊಳ್ಳಬಹುದು

ಡಿ) ಸದರಿ ಅಧಿನಿಯಮದ ಅಡಿಯಲ್ಲಿ ಮಾಡಿದ ಅಪರಾಧದ ಜೊತೆಗೆ ಪೋಕ್ಸೋ ಅಧಿನಿಯಮದಡಿಯಲ್ಲಿ ಅಧಿವಿಚಾರಣೆಗೊಳಪಡಬಹುದಾದಂತ ಅಪರಾಧವನ್ನು ಒಳಗೊಂಡಿದ್ದರೆ ಮಾತ್ರ ನೇರವಾಗಿ ಸಂಜ್ಞೇಯ ತೆಗೆದುಕೊಳ್ಳಬಹುದು

66 "Presumption of fact" under the Indian Evidence Act, 1872 is

A) based on logic, human experience and natural events and law of nature
B) based on provisions of law
C) based on the idea of the Judge
D) of certain uniform position

ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಅಡಿಯಲ್ಲಿ "ಸಂಗತಿಗಳ ಪೂರ್ವಭಾವನೆ" ಯು

ಎ) ತರ್ಕ, ಮಾನವ ಅನುಭವ ಮತ್ತು ನೈಸರ್ಗಿಕ ಘಟನೆಗಳು ಮತ್ತು ನೈಸರ್ಗಿಕ ಕಾನೂನಿನ ಮೇಲೆ ಆಧಾರಿತ
ಬಿ) ಕಾನೂನಿನ ಉಪಬಂಧಗಳ ಮೇಲೆ ಆಧಾರಿತ
ಸಿ) ನ್ಯಾಯಾಧೀಶನ ಕಲ್ಪನೆಯ ಮೇಲೆ ಆಧಾರಿತ
ಡಿ) ಕೆಲವು ಏಕರೂಪದ ಸ್ಥಿತಿ

67 Statement of witness recorded during investigation under the Code of Criminal Procedure, 1973 cannot be used at a criminal trial

A) except to contradict the witness
B) except when witness dies after recording examination-in-chief and before cross examination
C) except where the court feels that it would be safe to rely upon the said statement
D) both (A) and (B) above

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಅಡಿಯಲ್ಲಿ ತನಿಖಾ ಹಂತದಲ್ಲಿ ದಾಖಲಿಸಿಕೊಂಡ ಸಾಕ್ಷಿದಾರರ ಹೇಳಿಕೆಗಳನ್ನು ಅಪರಾಧಿಕ ಅಧಿವಿಚಾರಣೆಯಲ್ಲಿ ________ ಉಪಯೋಗಿಸಲು ಬರುವುದಿಲ್ಲ

ಎ) ಸಾಕ್ಷಿದಾರನಿಗೆ ವಿರೋಧೋಕ್ತಿ ಮಾಡಲು ಹೊರತುಪಡಿಸಿ
ಬಿ) ಮುಖ್ಯ ವಿಚಾರಣೆ ದಾಖಲಿಸಿದ ನಂತರ ಮತ್ತು ಪಾಟೀ ಸವಾಲು ಮಾಡುವ ಮೊದಲು ಸಾಕ್ಷಿ ಮೃತಪಟ್ಟಾಗ ಹೊರತುಪಡಿಸಿ
ಸಿ) ಅಂತಹ ಹೇಳಿಕೆಯನ್ನು ಅವಲಂಬಿಸುವುದು ಸುರಕ್ಷಿತವೆಂದು ನ್ಯಾಯಾಲಯಕ್ಕೆ ಅನಿಸಿದಾಗ ಹೊರತುಪಡಿಸಿ
ಡಿ) ಮೇಲಿನ (ಎ) ಮತ್ತು (ಬಿ) ಎರಡೂ

Teachingninja.in

68 A fact forming part of the same transaction is relevant under Section 6 of Evidence Act

A) if it is in issue and have occurred at the same time and place
B) if it is in issue and may have occurred at different times and places
C) though not in issue and may have occurred at the same time and place or at different times and places
D) though not in issue, must have occurred at the same time and place

ಸಾಕ್ಷ್ಯ ಅಧಿನಿಯಮದ ಕಲಂ 6ರ ಪ್ರಕಾರ ಅದೆ ವ್ಯವಹರಣೆಯ ಭಾಗವಾಗಿರುವ ಒಂದು ಸಂಗತಿಯು ಸುಸಂಗತವಾಗಲು

ಎ) ಅದು ವಿವಾದಾಂಶವಾಗಿ ಮತ್ತು ಒಂದೇ ಸಮಯದಲ್ಲಿ ಮತ್ತು ಸ್ಥಳದಲ್ಲಿ ಘಟಿಸಬೇಕಾಗಿರುತ್ತದೆ.
ಬಿ) ಅದು ವಿವಾದಾಂಶವಾಗಿ ಮತ್ತು ಬೇರೆ ಬೇರೆ ಸಮಯಗಳಲ್ಲಿ ಮತ್ತು ಸ್ಥಳಗಳಲ್ಲಿ ಘಟಿಸುವಂತಹದ್ದಾಗಿರಬಹುದು
ಸಿ) ಅದು ವಿವಾದಾಂಶವಾಗಿರದಿದ್ದರೂ ಮತ್ತು ಒಂದೇ ಸಮಯ ಮತ್ತು ಸ್ಥಳ ಅಥವಾ ಬೇರೆ ಬೇರೆ ಸಮಯಗಳಲ್ಲಿ ಮತ್ತು ಸ್ಥಳಗಳಲ್ಲಿ ಘಟಿಸುವಂತಹದ್ದಾಗಿರಬಹುದು
ಡಿ) ಅದು ವಿವಾದಾಂಶವಾಗಿರದಿದ್ದರೂ ಅದೇ ಸಮಯದಲ್ಲಿ ಮತ್ತು ಸ್ಥಳದಲ್ಲಿ ಘಟಿಸಬೇಕಾಗಿರುತ್ತದೆ.

69 Indian Evidence Act, 1872 does not express by mentioning about
A) oral evidence
B) documentary evidence
C) secondary evidence
D) circumstantial evidence

ಭಾರತೀಯ ಸಾಕ್ಷ್ಯ ಅಧಿನಿಯಮ, 1872 ವ್ಯಕ್ತವಾಗಿ ಹೇಳದಿರುವುದು
ಎ) ಮೌಖಿಕ ಸಾಕ್ಷ್ಯ
ಬಿ) ದಸ್ತಾವೇಜುಗಳ ಸಾಕ್ಷ್ಯ
ಸಿ) ದ್ವಿತೀಯಕ ಸಾಕ್ಷ್ಯ
ಡಿ) ಸಾಂದರ್ಭಿಕ ಸಾಕ್ಷ್ಯ

70 A decree of restitution of conjugal rights can be enforced under Order XXI Rule 32 of the Code of Civil Procedure, 1908

A) only by the attachment of the property of the judgment debtor
B) only by detention of judgment debtor in the Civil Prison
C) by both attchment of the property of judgment debtor and detention of judgment debtor in the Civil Prison.
D) by arresting the judgment debtor and taking to the house of the Decree holder.

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 21 ನಿಯಮ 32ರ ಪ್ರಕಾರ ದಾಂಪತ್ಯಾಧಿಕಾರ ಪುನರ್ ಪ್ರಾಪ್ತಿಯ ಡಿಕ್ರಿಯನ್ನು ಜಾರಿಗೊಳಿಸುವುದು
ಎ) ತೀರ್ಪುಋಣಿಯ ಸ್ವತ್ತನ್ನು ಜಪ್ತಿ ಮಾಡುವುದರಿಂದ ಮಾತ್ರ
ಬಿ) ತೀರ್ಪುಋಣಿಯನ್ನು ಸಿವಿಲ್ ಬಂಧಿಖಾನೆಯಲ್ಲಿ ಬಂಧಿಸಿಡುವುದರಿಂದ ಮಾತ್ರ
ಸಿ) ತೀರ್ಪುಋಣಿಯ ಸ್ವತ್ತಿನ ಜಪ್ತಿ ಮತ್ತು ಸಿವಿಲ್ ಬಂಧಿಖಾನೆಯಲ್ಲಿ ಅವನನ್ನು ಬಂಧಿಸಿಡುವುದು ಎರಡರ ಮೂಲಕವೂ

Teachingninja.in

ಡಿ) ತೀರ್ಪುಋಣಿಯನ್ನು ಬಂಧಿಸಿಡುವುದು ಮತ್ತು ಅವನನ್ನು/ಅವಳನ್ನು ಡಿಕ್ರಿದಾರನ ಮನೆಗೆ ಕರೆದುಕೊಂಡು ಹೋಗುವುದರ ಮೂಲಕ

71 Which of the following section of the Code of Criminal Procedure, 1973 deals with the classes of criminal courts?
A) Section 6
B) Section 7
C) Section 8
D) Section 9

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಈ ಕೆಳಗಿನ ಯಾವ ಕಲಂ ನ್ಯಾಯಾಲಯಗಳ ವರ್ಗಗಳ ಬಗ್ಗೆ ವ್ಯವಹರಿಸುತ್ತದೆ?
ಎ) ಕಲಂ 6
ಬಿ) ಕಲಂ 7
ಸಿ) ಕಲಂ 8
ಡಿ) ಕಲಂ 9

72 A teacher forcibly slaps a student on his cheek being angry with him for an act of indiscipline, as a result of which student dies. The act of the teacher
A) amounts to the offence under Section 302 of the Indian Penal Code
B) does not amount to any offence as the teacher had intended only to discipline the student
C) amounts to the offence under the second part of section 304 of the Indian Penal Code
D) amounts to the offence under section 304A of Indian Penal Code

ಅಶಿಸ್ತಿನ ಕಾರಣದಿಂದ ಶಿಕ್ಷಕಿಯು ಕೋಪಗೊಂಡು ಒಬ್ಬ ವಿದ್ಯಾರ್ಥಿಗೆ ಕೆನ್ನೆಗೆ ಬಲವಾಗಿ ಹೊಡೆಯುತ್ತಾಳೆ, ಆ ಕಾರಣದಿಂದ ಆತ ಮೃತ ಪಡುತ್ತಾನೆ. ಶಿಕ್ಷಕಿಯ ಕೃತ್ಯವು
ಎ) ಭಾರತ ದಂಡ ಸಂಹಿತೆಯ ಕಲಂ 302ರ ಅಡಿಯಲ್ಲಿನ ಅಪರಾಧವಾಗುತ್ತದೆ
ಬಿ) ವಿದ್ಯಾರ್ಥಿಗೆ ಶಿಸ್ತು ಕಲಿಸುವ ಉದ್ದೇಶದಿಂದ ಮಾಡಿದ್ದರಿಂದ ಯಾವುದೇ ಅಪರಾಧವಾಗುವುದಿಲ್ಲ
ಸಿ) ಭಾರತ ದಂಡ ಸಂಹಿತೆಯ ಕಲಂ 304ರ ಎರಡನೇ ಭಾಗದ ಅಡಿಯಲ್ಲಿ ಅಪರಾಧವಾಗುತ್ತದೆ
ಡಿ) ಭಾರತ ದಂಡ ಸಂಹಿತೆಯ ಕಲಂ 304ಎ ಅಡಿಯಲ್ಲಿ ಅಪರಾಧವಾಗುತ್ತದೆ

73 The 'Paradoxical Prime Minister' is a book written by
A) Shashi Taroor
B) Anupam Kher
C) Rodriguee Deborah
D) Sanjaya Baru

ದಿ 'ಪ್ಯಾರಾಡಾಕ್ಸಿಕಲ್ ಪ್ರೈಮ್ ಮಿನಿಸ್ಟರ್' ಪುಸ್ತಕ ಬರೆದವರು
ಎ) ಶಶಿ ತರೂರ್
ಬಿ) ಅನುಪಮ್ ಖೇರ್
ಸಿ) ರೋಡ್ರಿಗ್ ಡೆಬೊರಾ
ಡಿ) ಸಂಜಯ ಬರು

Teachingninja.in

74 Which of the following is the correct position of law in relation to the Narcotic Drugs and Psychotropic Substances Act?

A) a person accused of an offence involving commercial quantity of Narcotic substance cannot be granted bail in any circumstance

B) he can be granted bail keeping in view the general principle govering bail under Section 437 or 439 of the Code of Criminal Procedure, 1973

C) no person accused for offences involving commercial quantity shall be released on bail unless the public prosecutor has been given an opportunity to oppose the application for such release and if he opposes, the court is satisfied that there are reasonable grounds for beliving that the accused is not guilty of such offence and that he is not likely to commit any offence while on bail

D) he can be granted bail after filing the charge sheet

ಮಾದಕ ದ್ರವ್ಯ ಮತ್ತು ಮನೋವಿಕೃತ ವಸ್ತುಗಳ ಅಧಿನಿಯಮದ ಸಂಬಂಧದಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಸರಿಯಾದ ಕಾನೂನಿನ ಸ್ಥಿತಿ?

ಎ) ವಾಣಿಜ್ಯ ಪ್ರಮಾಣ ಮಾದಕ ವಸ್ತುವನ್ನು ಹೊಂದಿರುವ ಅಪರಾಧದಲ್ಲಿ ಸಿಲುಕಿದ ವ್ಯಕ್ತಿ ಜಾಮೀನು ಮೇಲೆ ಬಿಡುಗಡೆಯಾಗಲು ಯಾವುದೇ ಸಂದರ್ಭದಲ್ಲಿ ಬರುವುದಿಲ್ಲ

ಬಿ) ಅಪರಾಧ ಪ್ರಕ್ರಿಯಾ ಸಂಹಿತೆಯ ಕಲಂ 437 ಅಥವಾ 439ರ ಅಡಿಯಲ್ಲಿ ಜಾಮೀನು ನೀಡಲು ಸೂಚಿಸಿರುವ ಸಾಮಾನ್ಯ ತತ್ವವನ್ನು ಗಮನದಲ್ಲಿ ಇರಿಸಿಕೊಂಡು ಅವನಿಗೆ ಜಾಮೀನು ಮಂಜೂರು ಮಾಡಬಹುದು

ಸಿ) ಜಾಮೀನಿನ ಮೇಲೆ ಬಿಡುಗಡೆ ಮಾಡಲು ಹಾಕಿದ ಅರ್ಜಿಯನ್ನು ವಿರೋಧಿಸಲು ಸರ್ಕಾರಿ ಅಭಿಯೋಜಕರಿಗೆ ಅವಕಾಶ ಕೊಡದ ಹೊರತು ಮತ್ತು ಅವರು ವಿರೋಧಿಸಿದಲ್ಲಿ ಆಪಾದಿತನು ಸದರಿ ಅಪರಾಧವನ್ನು ಮಾಡಿಲ್ಲ ಎಂದು ನಂಬಲು ಯುಕ್ತ ಕಾರಣವಿದೆ ಮತ್ತು ಅವನು ಜಾಮೀನಿನ ಮೇಲೆ ಇದ್ದಾಗ ಯಾವುದೇ ಅಪರಾಧ ಮಾಡಲು ಸಾಧ್ಯತೆ ಇಲ್ಲ ಎಂದು ನ್ಯಾಯಾಲಯಕ್ಕೆ ಮನವರಿಕೆ ಆಗದ ಹೊರತು ವಾಣಿಜ್ಯ ಪ್ರಮಾಣದ ಮಾದಕ ವಸ್ತು ಹೊಂದಿರುವ ಅಪರಾಧ ಆರೋಪಕ್ಕೊಳಗಾದ ವ್ಯಕ್ತಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗದು

ಡಿ) ದೋಷಾರೋಪಣ ಪತ್ರ ಸಲ್ಲಿಸಿದ ನಂತರ ಜಾಮೀನು ಮೇಲೆ ಬಿಡುಗಡೆ ಮಾಡಬಹುದು

75 When an Appeal is dismissed for appellant's default, the application may be made for re-admission
A) under Order IX Rule 9 of the Code of Civil Procedure, 1908
B) under Order IX Rule 7 of the Code of Civil Procedure, 1908
C) under Order XLI Rule 19 of the Code of Civil Procedure, 1908
D) under Order XLI Rule 17 of the Code of Civil Procedure, 1908

ಮೇಲ್ಮನವಿದಾರರ ಗೈರು ಹಾಜರಾತಿಯ ಕಾರಣದಿಂದ ಮೇಲ್ಮನವಿ ವಜಾಗೊಂಡಾಗ ಪುನರಂಗೀಕಾರಕ್ಕಾಗಿ ಅರ್ಜಿಯನ್ನು ಮಾಡಬಹುದಾಗಿದ್ದು
ಎ) ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 9 ನಿಯಮ 9ರಡಿಯಲ್ಲಿ
ಬಿ) ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 9 ನಿಯಮ 7ರಡಿಯಲ್ಲಿ
ಸಿ) ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 41 ನಿಯಮ 19ರಡಿಯಲ್ಲಿ
ಡಿ) ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 41 ನಿಯಮ 17ರಡಿಯಲ್ಲಿ

Teachingninja.in

76 As per Section 2(j) of the Limitation Act, 1963, 'period of limitation' means the period of limitation prescribed for

A) suits only
B) appeals only
C) applications only
D) all the above

ಕಾಲಪರಿಮಿತಿ ಅಧಿನಿಯಮ, 1963 ಕಲಂ 2(ಜೆ) ಪ್ರಕಾರ 'ಕಾಲಪರಿಮಿತಿ ಅವಧಿ' ಎಂದರೆ _____ ಗೆ ನಿಗಧಿಪಡಿಸಿದ ಕಾಲ ಪರಿಮಿತಿ ಅವಧಿ

ಎ) ದಾವೆಗಳಿಗೆ ಮಾತ್ರ
ಬಿ) ಮೇಲ್ಮನವಿಗಳಿಗೆ ಮಾತ್ರ
ಸಿ) ಅರ್ಜಿಗಳಿಗೆ ಮಾತ್ರ
ಡಿ) ಮೇಲಿನ ಎಲ್ಲವೂ

77 Pardon may be tendered to an accomplice under Section 306 of the Code of Criminal Procedure, 1973 when

A) he is not in a position to stand trial due to infirm health
B) when he is declared insane
C) he undertakes to make full and true disclosure of facts relating to the offence
D) all above

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 306ರ ಅಡಿಯಲ್ಲಿ ಸಹಾಪರಾಧಿಗೆ ಯಾವಾಗ ಕ್ಷಮಾದಾನ ನೀಡಬಹುದು

ಎ) ಆರೋಗ್ಯದಲ್ಲಿ ಅಶಕ್ತನಾಗಿ ಅಧಿವಿಚಾರಣೆ ಎದುರಿಸುವ ಸ್ಥಿತಿಯಲ್ಲಿ ಅವನು ಇಲ್ಲದೆ ಇದ್ದಾಗ
ಬಿ) ಅವನು ಮನೋವಿಕಲ ಎಂದು ಘೋಷಣೆ ಮಾಡಿದಾಗ
ಸಿ) ಅಪರಾಧದ ಸಂಬಂಧ ಅವನು ಪೂರ್ಣ ಮತ್ತು ನಿಜವಾದ ಸಂಗತಿಗಳನ್ನು ಬಹಿರಂಗ ಪಡಿಸುತ್ತೇನೆ ಎಂದು ವಚನಬಂಧ ಮಾಡಿದಾಗ
ಡಿ) ಮೇಲಿನ ಎಲ್ಲವೂ

78 When an instrument not duly stamped has been admitted in evidence, as per Section 35 of the Karnataka Stamp Act, 1957 -

A) that can be questioned on the ground of insufficiency of stamp at any stage of the same proceedings

B) that shall not be questioned in the same suit or proceedings except as provided in Section 58 of the Karnataka Stamp Act, 1957

C) Court can direct payment of deficit stamp and penalty

D) None of the above

ನಿಗಧಿತ ಮುದ್ರಾಂಕವನ್ನು ಪಾವತಿಸದೇ ಇರುವ ಒಂದು ದಾಖಲೆಯು ಸಾಕ್ಷ್ಯದಲ್ಲಿ ಒಪ್ಪಿಕೊಂಡಿದ್ದರೆ ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ ಕಲಂ 35ರ ಪ್ರಕಾರ ಅದನ್ನು –

ಎ) ಸಾಕಷ್ಟು ಮುದ್ರಾಂಕ ಕೊಟ್ಟಿಲ್ಲ ಎನ್ನುವ ಕಾರಣಕ್ಕಾಗಿ ವ್ಯವಹರಣೆಯ ಯಾವುದೇ ಹಂತದಲ್ಲಿ ಪ್ರಶ್ನಿಸಬಹುದು

Teachingninja.in

ಬಿ) ಕರ್ನಾಟಕ ಮುದ್ರಾಂಕ ಅಧಿನಿಯಮ, 1957ರ ಕಲಂ 58 ಹೊರತುಪಡಿಸಿ ಅದೇ ದಾವೆ ಮತ್ತು ವ್ಯವಹರಣೆಯಲ್ಲಿ ಪ್ರಶ್ನಿಸತಕ್ಕುದಲ್ಲ

ಸಿ) ಕೊರತೆ ಮುದ್ರಾಂಕ ಮತ್ತು ದಂಡ ಪಾವತಿಸಲು ನ್ಯಾಯಾಲಯ ಆದೇಶಿಸಬಹುದು

ಡಿ) ಮೇಲಿನ ಯಾವುದೂ ಅಲ್ಲ

79 The time prescribed under Section 21B (2) of the Hindu Marriage Act, 1955, for conclusion of the trial of every petition under the said Act ________

A) six months from the date of petition
B) six months from the date of service of notice of the petition on the respondent
C) three months from the date of petition
D) three months from the date of service of notice of the petition on the respondent

ಹಿಂದೂ ವಿವಾಹ ಅಧಿನಿಯಮ, 1955ರ ಅಡಿಯಲ್ಲಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆಗೆ ಸದರಿ ಅಧಿನಿಯಮದ ಕಲಂ 21ಬಿ(2)ರ ಅಡಿಯಲ್ಲಿ ನಿಗಧಿಪಡಿಸಿರುವ ಅವಧಿ ________

ಎ) ಅರ್ಜಿ ಸಲ್ಲಿಸಿದ ದಿನಾಂಕದಿಂದ ಆರು ತಿಂಗಳುಗಳು
ಬಿ) ಎದುರುದಾರನಿಗೆ ಅರ್ಜಿಯ ನೋಟೀಸು ಜಾರಿಯಾದ ದಿನಾಂಕದಿಂದ ಆರು ತಿಂಗಳುಗಳು
ಸಿ) ಅರ್ಜಿ ಸಲ್ಲಿಸಿದ ದಿನಾಂಕದಿಂದ ಮೂರು ತಿಂಗಳುಗಳು
ಡಿ) ಎದುರುದಾರನಿಗೆ ಅರ್ಜಿಯ ನೋಟೀಸು ಜಾರಿಯಾದ ದಿನಾಂಕದಿಂದ ಮೂರು ತಿಂಗಳುಗಳು

80 No person shall be eligible for election as President of India unless one completes the age of

A) 30 years
B) 35 years
C) 45 years
D) 50 years

________ ಪೂರ್ತಿಯಾಗದ ಹೊರತು ಯಾವುದೇ ವ್ಯಕ್ತಿಯು ಭಾರತದ ರಾಷ್ಟ್ರಪತಿಯಾಗಿ ಚುನಾಯಿತನಾಗಲು ಅರ್ಹನಾಗಿರತಕ್ಕದಲ್ಲ

ಎ) 30 ವರ್ಷಗಳು
ಬಿ) 35 ವರ್ಷಗಳು
ಸಿ) 45 ವರ್ಷಗಳು
ಡಿ) 50 ವರ್ಷಗಳು

81 Section 65A of the Indian Evidence Act, 1872 deals with

A) Documentary evidence
B) Evidence relating to Electronic Signature
C) Evidence relating to Electronic records
D) Evidence relating to comparison of Signature

Teachingninja.in

ಭಾರತದ ಸಾಕ್ಷ್ಯ ಅಧಿನಿಯಮ, 1872ರ ಕಲಂ 65ಎ ವ್ಯವಹರಿಸುವುದು
ಎ) ದಸ್ತಾವೇಜೀಯ ಸಾಕ್ಷ್ಯ
ಬಿ) ವಿದ್ಯುನ್ಮಾನ ಸಹಿಗೆ ಸಂಬಂಧಿಸಿದ ಸಾಕ್ಷ್ಯ
ಸಿ) ವಿದ್ಯುನ್ಮಾನ ದಾಖಲೆಗಳಿಗೆ ಸಂಬಂಧಿಸಿದ ಸಾಕ್ಷ್ಯ
ಡಿ) ಸಹಿಯ ಹೋಲಿಕೆಗೆ ಸಂಬಂಧಿಸಿದ ಸಾಕ್ಷ್ಯ

82 While deciding dispute of relationship of landlord and tenant under section 43 of the Karnataka Rent Act, 1999, which of the following document can be accepted as primafacie evidence of landlord-tenant relationship
A) Affidavit of the landlord only
B) document of lease only
C) receipt of acknowledgment of payment of rent only
D) both (B) and (C)

ಕರ್ನಾಟಕ ಬಾಡಿಗೆ ಅದಿನಿಯಮ, 1999ರ ಕಲಂ 43ರ ಅಡಿಯಲ್ಲಿ ಭೂ ಮಾಲಿಕ ಮತ್ತು ಬಾಡಿಗೆದಾರರ ನಡುವಿನ ಸಂಬಂಧದ ಕುರಿತು ತಕರಾರು ಉದ್ಭವವಾದ ಸಂದರ್ಭದಲ್ಲಿ ಈ ಕೆಳಗಿನ ಯಾವ ದಾಖಲೆ ಪತ್ರವನ್ನು ಮೇಲ್ನೋಟದ ಸಾಕ್ಷಿಯೆಂದು ಒಪ್ಪಿಕೊಳ್ಳಬಹುದು
ಎ) ಭೂ ಮಾಲಿಕನ ಶಪಥ ಪತ್ರ ಮಾತ್ರ
ಬಿ) ಬಾಡಿಗೆ ಪತ್ರ ಮಾತ್ರ
ಸಿ) ಬಾಡಿಗೆ ಸ್ವೀಕೃತಿ ರಸೀದಿ ಮಾತ್ರ
ಡಿ) (ಬಿ) ಮತ್ತು (ಸಿ) ಎರಡೂ

83 The main function of the Judiciary is
A) Law execution
B) Law formulation
C) Law application
D) Law adjudicaiton

ನ್ಯಾಯಾಂಗದ ಮುಖ್ಯ ಕಾರ್ಯ
ಎ) ಕಾನೂನಿನ ಅಮಲ್ಜಾರಿ
ಬಿ) ಕಾನೂನಿನ ಸೂತ್ರೀಕರಣ
ಸಿ) ಕಾನೂನಿನ ಅನ್ವಯಿಸುವಿಕೆ
ಡಿ) ಕಾನೂನಿನ ನ್ಯಾಯ ನಿರ್ಣಯ

84 Nothing is an offence which is done by a person aged __________
A) 16 years
B) 6 years
C) 12 years
D) 8 years

________ ವಯೋಮಾನದ ವ್ಯಕ್ತಿಯು ಮಾಡಿರುವ ಯಾವುದೇ ಕೃತ್ಯವು ಅಪರಾಧವಾಗುವುದಿಲ್ಲ
ಎ) ಹದಿನಾರು ವರ್ಷ
ಬಿ) ಆರು ವರ್ಷ

Teachingninja.in

ಸಿ) ಹನ್ನೆರಡು ವರ್ಷ
ಡಿ) ಎಂಟು ವರ್ಷ

85 The presumptions referred to under Section 29 and 30 of the Protection of Children from Sexual offences Act, 2012
A) are rebuttable presumptions
B) discretionary presumptions and the special court may or may not draw the presumptions.
C) irrebuttable presumptions
D) presumption of probability and proof beyond reasonable doubt is not sufficient for the accused to rebut the presumption

ಲೈಂಗಿನ ಅಪರಾಧದಿಂದ ಮಕ್ಕಳ ರಕ್ಷಣಾ ಅಧಿನಿಯಮದ ಕಲಂ 29 ಮತ್ತು 30ನ್ನು ಉಲ್ಲೇಖಿಸಿದ ಪೂರ್ವಭಾವನೆಗಳು
ಎ) ಅಲ್ಲಗಳೆಯಬಹುದಾದ ಪೂರ್ವಭಾವನೆಗಳು
ಬಿ) ವಿವೇಚನಾತ್ಮಕ ಪೂರ್ವಭಾವನೆಗಳು ಮತ್ತು ವಿಶೇಷ ನ್ಯಾಯಾಲಯವು ಪೂರ್ವಭಾವನೆಗಳನ್ನು ತಳೆಯಬಹುದು ಅಥವಾ ತಳೆಯದೇ ಇರಬಹುದು
ಸಿ) ಅಲ್ಲಗಳೆಯಲಾಗದ ಪೂರ್ವಭಾವನೆಗಳು
ಡಿ) ಸಂಭವನೀಯತೆಯ ಪೂರ್ವಭಾವನೆ ಮತ್ತು ಪೂರ್ವಭಾವನೆ ಅಲ್ಲಗಳೆಯಲು ಆರೋಪಿಯು ಯುಕ್ತ ಸಂಶಯಾತೀತವಾಗಿ ರುಜುವಾತು ಮಾಡುವುದು ಸಾಕಾಗುವುದಿಲ್ಲ

86 'Decree-holder' means any person, in whose favour
A) a decree has been passed by Court only
B) an order capable of execution has been made by Court only
C) an order passed by the quasi-judicial Authority
D) (A) & (B) both

'ಡಿಕ್ರಿದಾರ'ನೆಂದರೆ ತನ್ನ ಪರವಾಗಿ
ಎ) ನ್ಯಾಯಾಲಯದ ಡಿಕ್ರಿ ಪಡೆದಿರುವಾತ ಮಾತ್ರ
ಬಿ) ಅಮಲ್ಜಾರಿಗೊಳಿಸಬಹುದಾದ ನ್ಯಾಯಾಲಯದ ಆದೇಶ ಪಡೆದಿರುವಾತ ಮಾತ್ರ
ಸಿ) ನ್ಯಾಯಿಕ ಸ್ವರೂಪದ ಪ್ರಾಧಿಕಾರ ಮಾಡಿರುವ ಆದೇಶವನ್ನು ಪಡೆದಿರುವಾತ
ಡಿ) (ಎ) ಮತ್ತು (ಬಿ) ಎರಡೂ

87 The principle of Estoppel is found in
A) the Indian Evidence Act
B) the Contract Act
C) the Code of Civil Procedure
D) the Specific Relief Act

ಸ್ವಯಂಕೃತ ಪ್ರತಿಬಂಧ ತತ್ವವು ಕಂಡುಬರುವುದು
ಎ) ಭಾರತದ ಸಾಕ್ಷ್ಯ ಅಧಿನಿಯಮದಲ್ಲಿ
ಬಿ) ಕರಾರು ಅಧಿನಿಯಮದಲ್ಲಿ
ಸಿ) ದಿವಾಣಿ ಪ್ರಕ್ರಿಯಾ ಸಂಹಿತೆಯಲ್ಲಿ
ಡಿ) ನಿರ್ದಿಷ್ಟ ಪರಿಹಾರ ಅಧಿನಿಯಮದಲ್ಲಿ

Teachingninja.in

88 Section 5 of the Limitation Act, 1963 is not applicable to
A) Appeals
B) Applications
C) Suits
D) None of the above

ಕಾಲಮಿತಿ ಅಧಿನಿಯಮ, 1963ರ ಕಲಂ 5, ಅನ್ವಯಿಸಲಾಗದ್ದು
ಎ) ಮೇಲ್ಮನವಿಗಳಿಗೆ
ಬಿ) ಅರ್ಜಿಗಳಿಗೆ
ಸಿ) ದಾವೆಗಳಿಗೆ
ಡಿ) ಮೇಲಿನ ಯಾವುದೂ ಅಲ್ಲ

89 The term 'Judicial Notice' under the Indian Evidence Act, 1872 means-
A) notice given by the Court
B) information given to the Court
C) to ask for evidence
D) to recognise without proof something as existing

ಭಾರತೀಯ ಸಾಕ್ಷ್ಯ ಅದಿನಿಯಮ, 1872ರ ಅಡಿಯಲ್ಲಿ 'ನ್ಯಾಯಿಕ ಸೂಚನೆ' ಎಂಬ ಪದದ ಅರ್ಥ-
ಎ) ನ್ಯಾಯಾಲಯ ಕೊಟ್ಟಂತಹ ನೋಟೀಸು
ಬಿ) ನ್ಯಾಯಾಲಯಕ್ಕೆ ಕೊಟ್ಟ ಮಾಹಿತಿ
ಸಿ) ಪುರಾವೆಗಾಗಿ ಕೇಳುವುದು
ಡಿ) ಕೆಲವು ಸಂಗತಿಗಳನ್ನು ರುಜುವಾತು ಇಲ್ಲದೆ ಅಂಗೀಕರಿಸುವುದು

90 Under the Karnataka Stamp Act, impounding of an instrument arises
A) when plaintiff fails to produce the document
B) when the document is not properly attested
C) when the document is not registered
D) when insufficiently stamped document is produced before the Public Authority

ಕರ್ನಾಟಕ ಮುದ್ರಾಂಕ ಅಧಿನಿಯಮದಡಿಯಲ್ಲಿ ಲಿಖಿತ ಪತ್ರದ ಪರಿಬದ್ಧತೆ ಉದ್ಭವಿಸುವುದು
ಎ) ವಾದಿ ದಸ್ತಾವೇಜನ್ನು ಹಾಜರು ಪಡಿಸಲು ವಿಫಲನಾದಾಗ
ಬಿ) ದಸ್ತಾವೇಜನ್ನು ಸರಿಯಾಗಿ ಅನುಪ್ರಮಾಣಿತ ಮಾಡದೇ ಇದ್ದಾಗ
ಸಿ) ದಸ್ತಾವೇಜು ನೋಂದಣಿ ಆಗದೇ ಇದ್ದಾಗ
ಡಿ) ಸಾರ್ವಜನಿಕ ಪ್ರಾಧಿಕಾರದ ಮುಂದೆ ಕೊರತೆ ಮುದ್ರಾಂಕವುಳ್ಳ ದಸ್ತಾವೇಜನ್ನು ಹಾಜರು ಪಡಿಸಿದಾಗ

91 Which of the following is the correct legal position in relation to the Prevention of Corruption Act?

A) a Special Judge trying the cases under the Prevention of Corruption Act being an officer of cadre of Sessions Judge cannot take cognizance of an offence without the case being committed by a Magistrate to him in view of the bar under Section 193 of the Code of Criminal Procedure, 1973

Teachingninja.in

B) he can take cognizance under the Prevention of Corruption Act without the case being committed

C) he cannot take cognizance without case being committed, if in addition to the offence under the Prevention of Corruption Act, offences under Indian Penal Code are also inlcuded in the charge sheet

D) he cannot take cognizance without the case being committed, where the charge sheet is filed against a private person also in addition to a public servant

ಭ್ರಷ್ಟಾಚಾರ ಪ್ರತಿಬಂಧ ಕಾಯಿದೆಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವುದು ಸರಿಯಾದ ಕಾನೂನಿನ ಸ್ಥಿತಿ?

ಎ) ಭ್ರಷ್ಟಾಚಾರ ಪ್ರತಿಬಂಧ ಕಾಯಿದೆಯಡಿಯಲ್ಲಿನ ಪ್ರಕರಣಗಳ ವಿಚಾರಣೆ ನಡೆಸುವ ವಿಶೇಷ ನ್ಯಾಯಾಧೀಶರು ಸೆಷನ್ಸ್ ನ್ಯಾಯಾಧೀಶರ ಹುದ್ದೆಯವರಾಗಿರುವುದರಿಂದ ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 193ರಲ್ಲಿ ನಿಷೇಧದ ಕಾರಣದಿಂದ ಮ್ಯಾಜಿಸ್ಟ್ರೇಟರಿಂದ ಪ್ರಕರಣ ಕಮಿಟ್ ಆಗದೆ ಸಂಜ್ಞೇಯ ತೆಗೆದುಕೊಳ್ಳಲು ಬರುವುದಿಲ್ಲ

ಬಿ) ಪ್ರಕರಣ ಕಮಿಟ್ ಆಗದೆ ಭ್ರಷ್ಟಾಚಾರ ಪ್ರತಿಬಂಧ ಕಾಯಿದೆಯಡಿಯಲ್ಲಿ ಸಂಜ್ಞೇಯ ತೆಗೆದುಕೊಳ್ಳಬಹುದು

ಸಿ) ದೋಷಾರೋಪಣ ಪತ್ರದಲ್ಲಿ ಭ್ರಷ್ಟಾಚಾರ ಪ್ರತಿಬಂಧ ಕಾಯಿದೆಯಡಿಯಲ್ಲಿನ ಅಪರಾಧದ ಜೊತೆಗೆ ಭಾರತ ದಂಡ ಸಂಹಿತೆಯ ಅಪರಾಧಗಳು ಸೇರಿದ್ದರೆ ಕಮಿಟ್ ಆಗದೆ ಸಂಜ್ಞೇಯ ತೆಗೆದುಕೊಳ್ಳಲು ಬರುವುದಿಲ್ಲ

ಡಿ) ಸಾರ್ವಜನಿಕ ಸೇವಕನೊಂದಿಗೆ ಖಾಸಗಿ ವ್ಯಕ್ತಿಯ ವಿರುದ್ಧವು ದೋಷಾರೋಪಣ ಪತ್ರವನ್ನು ಸಲ್ಲಿಸಿದ್ದರೆ ಪ್ರಕರಣ ಕಮಿಟ್ ಮಾಡದೆ ಸಂಜ್ಞೇಯ ತೆಗೆದುಕೊಳ್ಳಲು ಬರುವುದಿಲ್ಲ

92 A victim of the offence punishable under Section 354 of the Indian Penal Code, 1860 goes to the police station to give a complaint, and S.H.O. fails to record the information given by her. A charge sheet came to be filed against the S.H.O. for failing to record the information. Which of the following is a tenable defence for the S.H.O.?

A) failure to record the first information report is not an offence, as the victim's remedy was to approach the superintendent of police as provided under Section 154(3) of the Code of Criminal Procedure, 1973

B) at the most, the S.H.O. is liable for disciplinary enquiry under service rules

C) without obtaining sanction under Section 197 of the Code of Criminal Procedure, 1973, the S.H.O. could not have been prosecuted

D) None of the above

ಭಾರತ ದಂಡ ಸಂಹಿತೆ, 1860ರ ಕಲಂ 354ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧದ ಸಂತ್ರಸ್ತೆ ದೂರು ಕೊಡಲು ಪೋಲೀಸು ಠಾಣೆಗೆ ಹೋಗುತ್ತಾಳೆ ಮತ್ತು ಎಸ್.ಹೆಚ್.ಓ. ರವರು ಆಕೆಯ ಮಾಹಿತಿಯನ್ನು ದಾಖಲು ಮಾಡಲು ವಿಫಲರಾಗುತ್ತಾರೆ. ಮಾಹಿತಿಯನ್ನು ದಾಖಲು ಮಾಡಲು ವಿಫಲನಾಗಿದಕ್ಕೆ ಎಸ್.ಹೆಚ್.ಓ. ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಲಾಗಿದೆ. ಈ ಕೆಳಗಿನವುಗಳಲ್ಲಿ ಎಸ್.ಹೆಚ್.ಓ. ರವರ ಯಾವ ವಾದ ಸಮರ್ಥನೀಯವಾಗುತ್ತದೆ?

ಎ) ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 154(3)ರ ಅಡಿಯಲ್ಲಿ ಪೋಲೀಸು ವರಿಷ್ಠಾಧಿಕಾರಿಯವರನ್ನು ಬಳಿಸಾರಿ ಪರಿಹಾರ ಪಡೆಯಲು ಸಂತ್ರಸ್ತೆಗೆ ಅವಕಾಶವಿದ್ದುದರಿಂದ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಲು ವಿಫಲನಾಗಿದ್ದು ಅಪರಾಧವಾಗುವುದಿಲ್ಲ

Teachingninja.in

ಬಿ) ಹೆಚ್ಚೆಂದರೆ ಎಸ್.ಹೆಚ್.ಓ. ರವರು ಸೇವಾ ನಿಯಮದ ಪ್ರಕಾರ ಶಿಸ್ತು ವಿಚಾರಣೆಗೆ ಹೊಣೆಗಾರನು

ಸಿ) ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 197ರ ಅಡಿಯಲ್ಲಿ ಅನುಮೋದನೆ ಪಡೆಯದೇ ಎಸ್.ಹೆಚ್.ಓ.ರನ್ನು ಅಭಿಯೋಜನೆಗೆ ಒಳಪಡಿಸಲಾಗುವುದಿಲ್ಲ

ಡಿ) ಮೇಲಿನ ಯಾವುದೂ ಅಲ್ಲ

93 Disclosure of the identity of the victim of rape is punishable under which of the following provisions of the Indian Penal Code?
A) Section 354D
B) Section 376E
C) Section 229
D) Section 228A

ಅತ್ಯಾಚಾರ ಸಂತ್ರಸ್ತರ ಗುರುತು ಬಹಿರಂಗ ಪಡಿಸುವುದು ಈ ಕೆಳಕಂಡ ಭಾರತ ದಂಡ ಸಂಹಿತೆಯ ಯಾವ ಉಪಬಂಧಗಳಲ್ಲಿ ಶಿಕ್ಷಾರ್ಹವಾಗಿದೆ?
ಎ) ಕಲಂ 354ಡಿ
ಬಿ) ಕಲಂ 376ಇ
ಸಿ) ಕಲಂ 229
ಡಿ) ಕಲಂ 228ಎ

94 Court can summon a person as an accused invoking section 319 of the Code of Criminal Procedure, 1973
A) only in the course of enquiry
B) only in the course of trial
C) both (A) and (B)
D) none of the above

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 319ರ ಅಡಿಯಲ್ಲಿ ನ್ಯಾಯಾಲಯ ಒಬ್ಬ ವ್ಯಕ್ತಿಯನ್ನು ಆರೋಪಿಯನ್ನಾಗಿ ಸಮನ್ ಮಾಡಬಹುದಾದದ್ದು
ಎ) ವಿಚಾರಣಾ ಹಂತದಲ್ಲಿ ಮಾತ್ರ
ಬಿ) ಅಧಿವಿಚಾರಣಾ ಹಂತದಲ್ಲಿ ಮಾತ್ರ
ಸಿ) (ಎ) ಮತ್ತು (ಬಿ) ಎರಡೂ
ಡಿ) ಮೇಲಿನ ಯಾವುದೂ ಅಲ್ಲ

95 The provisions of the Karnataka Rent Act, 1999 shall not apply to any premises belonging to
A) the State Government or a local authority only
B) the Central Government only
C) a Muzarai or religious or charitable institution only
D) All the above

ಕರ್ನಾಟಕ ಬಾಡಿಗೆ ಅದಿನಿಯಮ, 1999 ಈ ಕೆಳಗಿನವುಗಳಿಗೆ ಸೇರಿದ ಸ್ವತ್ತಿಗೆ ಅನ್ವಯಿಸುವುದಿಲ್ಲ
ಎ) ರಾಜ್ಯ ಸರ್ಕಾರ ಅಥವಾ ಸ್ಥಾನಿಕ ಪ್ರಾಧಿಕಾರ ಮಾತ್ರ
ಬಿ) ಕೇಂದ್ರ ಸರ್ಕಾರ ಮಾತ್ರ

Teachingninja.in

ಸಿ) ಮುಜರಾಯಿ ಅಥವಾ ಧಾರ್ಮಿಕ ಅಥವಾ ಸೇವಾ ಸಂಸ್ಥೆಗಳಿಗೆ ಮಾತ್ರ
ಡಿ) ಮೇಲಿನ ಎಲ್ಲವೂ

96 Under Section 62 of the Indian Contract Act, 1872, if the parties to a contract agree to substitute a new contract for it, or to rescind or alter it,
A) the original contract need to be performed
B) the original contract need not be performed
C) the original contract shall be performed
D) the original contract can be modified

ಭಾರತ ಕರಾರು ಅಧಿನಿಯಮ, 1872ರ ಕಲಂ 62ರ ಅಡಿಯಲ್ಲಿ ಕರಾರಿನ ಪಕ್ಷಕಾರರು ಹೊಸ ಕರಾರನ್ನು ಬದಲಿಯಾಗಿ ಸೇರಿಸಲು ಅಥವಾ ರದ್ದುಗೊಳಿಸಲು ಅಥವಾ ಮಾರ್ಪಡಿಸಲು ಒಪ್ಪಿಕೊಂಡರೆ
ಎ) ಮೂಲ ಕರಾರನ್ನು ನೆರವೇರಿಸುವ ಅವಶ್ಯಕತೆಯಿದೆ
ಬಿ) ಮೂಲ ಕರಾರನ್ನು ನೆರವೇರಿಸುವ ಅವಶ್ಯಕತೆಯಿಲ್ಲ
ಸಿ) ಮೂಲ ಕರಾರನ್ನು ನೆರವೇರಿಸತಕ್ಕದ್ದು
ಡಿ) ಮೂಲ ಕರಾರನ್ನು ಬದಲಾಯಿಸಬಹುದು

97 'A', 'B', 'C', 'D' and 'E' meet at a common place to discuss about lack of civic amenities in their locality. Subsequently 'X' and 'Y' join them there in the discussion. During the course of discussion, a clash ensues between the group of 'A' to 'E' on one hand, group of 'X' and 'Y' on another hand and 'A', 'C' and 'D' assault 'X' and 'Y' with stones and clubs and 'X' and 'Y' suffer hurt. Police filed a charge sheet agianst 'A' to 'E' inter alia for the offence punishable under Section 324 r/w sections 149 of the Indian Penal Code, 1860

In such fact situation which of the following contention of the accused is tenable?

A) Since accused went to that place for discussion about lack of amenities, their assembly was not unlawful, therefore, Section 149 of the Indian Penal Code, 1860 could not have been invoked

B) Since 'A', 'C' and 'D' allegedly assaulted 'X' and 'Y', only they are liable to be convicted for the offence under Section 324 of the Indian Penal Code, 1860

C) 'X' and 'Y' having joined the assembly, they are also liable to be convicted for Section 149 of the Indian Penal Code, 1860

D) None of the above

'ಎ', 'ಬಿ', 'ಸಿ', 'ಡಿ' ಮತ್ತು 'ಇ' ಯು ಅವರು ಇರುವ ಜಾಗದಲ್ಲಿ ನಾಗರಿಕ ಸೌಲಭ್ಯದ ಕೊರತೆ ಬಗ್ಗೆ ಚರ್ಚಿಸಲು ಒಂದು ಸಾಮಾನ್ಯ ಸ್ಥಳದಲ್ಲಿ ಸಭೆ ಸೇರುತ್ತಾರೆ. ನಂತರ 'ಎಕ್ಸ್' ಮತ್ತು 'ವೈ' ಬಂದು ಆ ಸಭೆಯಲ್ಲಿ ಸೇರುತ್ತಾರೆ. ಚರ್ಚಿಸುವ ಸಮಯದಲ್ಲಿ 'ಎ' ಯಿಂದ 'ಇ' ಒಂದು ಗುಂಪಾಗಿ 'ಎಕ್ಸ್' ಮತ್ತು 'ವೈ' ಇನ್ನೊಂದು ಗುಂಪಾಗಿ ಅವರ

Teachingninja.in

ನಡುವೆ ಸಂಘರ್ಷ ಉಂಟಾಗುತ್ತದೆ ಮತ್ತು 'ಎ', 'ಸಿ' ಮತ್ತು 'ಡಿ' ರವರು 'ಎಕ್ಸ್' ಮತ್ತು 'ವೈ' ರವರಿಗೆ ಕಲ್ಲು ಮತ್ತು ದೊಣ್ಣೆಯಿಂದ ಹಲ್ಲೆ ಮಾಡುತ್ತಾರೆ. ಇದರಿಂದ ಅವರು ಗಾಯಗೊಳ್ಳುತ್ತಾರೆ. ಪೋಲೀಸರು 'ಎ' ಯಿಂದ 'ಇ' ಯವರ ವಿರುದ್ಧ ಭಾರತ ದಂಡ ಸಂಹಿತೆಯ ಕಲಂ 324 ಸಹವಾಚಕ 149ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದಾರೆ ಎಂದು ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

ಈ ಸಂಗತಿಗೆ ಅನುಸಾರವಾಗಿ ಈ ಕೆಳಗಿನವುಗಳ ಪೈಕಿ ಆರೋಪಿಯ ಯಾವ ವಾದ ಸಮರ್ಥನೀಯವಾಗುತ್ತದೆ?

ಎ) ಆರೋಪಿತರು ನಾಗರಿಕ ಸೌಲಭ್ಯದ ಕೊರತೆ ಬಗ್ಗೆ ಚರ್ಚಿಸಲು ಆ ಸ್ಥಳಕ್ಕೆ ಹೋಗಿದ್ದರಿಂದ ಅವರ ಕೂಟ ಕಾನೂನು ಬಾಹಿರವಾಗಿಲ್ಲ, ಆದ್ದರಿಂದ ಭಾರತ ದಂಡ ಸಂಹಿತೆ, 1860ರ ಕಲಂ 149 ಅನ್ನು ಸೇರಿಸಲಾಗದು

ಬಿ) 'ಎ', 'ಸಿ' ಮತ್ತು 'ಡಿ' ಮಾತ್ರ 'ಎಕ್ಸ್' ಮತ್ತು 'ವೈ' ಗೆ ಹಲ್ಲೆ ಮಾಡಿದ್ದರಿಂದ ಅವರು ಮಾತ್ರ ಭಾರತ ದಂಡ ಸಂಹಿತೆ, 1860ರ ಕಲಂ 324ರ ಅಡಿಯಲ್ಲಿ ದೋಷಿಯಾಗಲು ಹೊಣೆಯಾಗುತ್ತಾರೆ

ಸಿ) 'ಎಕ್ಸ್' ಮತ್ತು 'ವೈ' ಕೂಟದಲ್ಲಿ ಸೇರಿದ್ದರಿಂದ ಅವರೂ ಭಾರತ ದಂಡ ಸಂಹಿತೆ, 1860ರ ಕಲಂ 149ರ ಅಡಿಯಲ್ಲಿ ದೋಷಿಯಾಗಲು ಹೊಣೆಯಾಗುತ್ತಾರೆ

ಡಿ) ಮೇಲಿನ ಯಾವುದೂ ಅಲ್ಲ

98 Which of the following is the oldest High Court in India?
A) High Court of Madras
B) High Court of Calcutta
C) High Court of Mumbai
D) High Court of Allahabad

ಈ ಕೆಳಗಿನವುಗಳಲ್ಲಿ ಭಾರತದ ಅತ್ಯಂತ ಪುರಾತನ ಉಚ್ಚ ನ್ಯಾಯಾಲಯ ಯಾವುದು?
ಎ) ಮದರಾಸಿನ ಉಚ್ಚ ನ್ಯಾಯಾಲಯ
ಬಿ) ಕಲ್ಕತ್ತದ ಉಚ್ಚ ನ್ಯಾಯಾಲಯ
ಸಿ) ಮುಂಬಯಿಯ ಉಚ್ಚ ನ್ಯಾಯಾಲಯ
ಡಿ) ಅಲಹಬಾದಿನ ಉಚ್ಚ ನ್ಯಾಯಾಲಯ

99 As per Section 143 of the Indian Evidence Act, 1872, leading questions may be asked
A) in examination-in-chief
B) in cross-examination
C) in re-examination
D) in the further chief examination

ಭಾರತದ ಸಾಕ್ಷ್ಯ ಅಧಿನಿಯಮ, 1872ರ ಕಲಂ 143ರಂತೆ ಉತ್ತರ ಸೂಚಕ ಪ್ರಶ್ನೆಯನ್ನು ಕೇಳಬಹುದಾಗಿದ್ದು
ಎ) ಮುಖ್ಯ ವಿಚಾರಣೆಯಲ್ಲಿ
ಬಿ) ಪಾಟೀ ಸವಾಲಿನಲ್ಲಿ
ಸಿ) ಮನರ್‌ವಿಚಾರಣೆಯಲ್ಲಿ
ಡಿ) ನ್ಯಾಯಾಲಯದ ಅನುಮತಿ ಮೇರೆಗೆ ಮೇಲಿನ ಎಲ್ಲವೂ

Teachingninja.in

100 Which of the following is the incorrect statement with reference to recording of the statement of the victim child in the investigating under POCSO Act?

A) the statement of the victim child cannot be rocorded at all by a police officer

B) shall be recorded at the residence of the child or at a place where the child usually resides or at a place of child's choice

C) the statement shall be recorded as far as practicable by a women police officer not below the rank of sub-inspector

D) while examining the child, the police officer shall ensure that at no point of time the child comes in the contact with the accused

ಪೋಕ್ಸೋ ಅಧಿನಿಯಮದ ಅಡಿಯಲ್ಲಿನ ಅಪರಾಧದ ತನಿಖೆಯಲ್ಲಿ ಸಂತ್ರಸ್ತ ಮಗುವಿನ ಹೇಳಿಕೆಯನ್ನು ದಾಖಲಿಸಿಕೊಳ್ಳುವ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವುದು ಸರಿಯಾದ ಉತ್ತರವಲ್ಲ?

ಎ) ಸಂತ್ರಸ್ತ ಮಗುವಿನ ಹೇಳಿಕೆಯನ್ನು ಪೊಲೀಸ್ ಅಧಿಕಾರಿ ದಾಖಲಿಸಲಾಗದು

ಬಿ) ಹೇಳಿಕೆಯನ್ನು ಮಗುವಿನ ಮನೆಯಲ್ಲಿ ಅಥವಾ ಮಗುವು ಸಾಮಾನ್ಯವಾಗಿ ವಾಸಿಸುವ ಸ್ಥಳದಲ್ಲಿ ಅಥವಾ ಮಗುವಿನ ಆಯ್ಕೆಯ ಸ್ಥಳದಲ್ಲಿ ದಾಖಲಿಸತಕ್ಕುದು

ಸಿ) ಸಾಧ್ಯವಾದ ಮಟ್ಟಿಗೆ ಮಗುವಿನ ಹೇಳಿಕೆಯನ್ನು ಸಬ್‌ಇನ್ಸ್‌ಪೆಕ್ಟರ್ ಹುದ್ದೆಗಿಂತ ಕಡಿಮೆ ಇರದ ಮಹಿಳಾ ಪೋಲೀಸು ಅಧಿಕಾರಿಯೇ ದಾಖಲಿಸತಕ್ಕುದು

ಡಿ) ಮಗುವನ್ನು ವಿಚಾರಿಸುವಾಗ ಮಗು ಯಾವುದೇ ಸಮಯದಲ್ಲಿ ಆರೋಪಿಯ ಸಂಪರ್ಕಕ್ಕೆ ಬಾರದ ಹಾಗೆ ಖಚಿತಪಡಿಸಿಕೊಳ್ಳತಕ್ಕುದು

------------

Teachingninja.in